ಸಂಪುಟ 01 | ಸಂಚಿಕೆ 220 | ಸೋಮವಾರ 06 ಜುಲೈ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1.ವಿಶ್ವ ಝೂನೋಸಿಸ್ ದಿನ (World Zoonoses Day)**
ಪ್ರತಿವರ್ಷ ಜುಲೈ 6ರಂದು ಆಚರಿಸಲಾಗುತ್ತದೆ. ಪ್ರಾಣಿಗಳಿಂದ ಮನುಷ್ಯರಿಗೆ ಹರಡುವ ರೋಗಗಳ (ಉದಾ: ರೇಬೀಸ್) ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶ.

**2. ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಜನ್ಮದಿನ**

(Dr. Syama Prasad Mookerjee Birth Anniversary) ಭಾರತೀಯ ಜನಸಂಘದ ಸಂಸ್ಥಾಪಕರಾದ ಡಾ. ಶ್ಯಾಮ ಪ್ರಸಾದ್ ಮುಖರ್ಜಿ ಅವರ ಜನ್ಮದಿನವನ್ನು (ಜುಲೈ 6, 1901) ರಾಷ್ಟ್ರ ಮಟ್ಟದಲ್ಲಿ ಸ್ಮರಿಸಲಾಗುತ್ತದೆ. ಕೆಲವು ರಾಜ್ಯಗಳಲ್ಲಿ ಈ ದಿನದ ಅಂಗವಾಗಿ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ.

**3. ಸ್ಥಳೀಯ ಪ್ರಮುಖ ಸಾಂಸ್ಕೃತಿಕ ಕಾರ್ಯಕ್ರಮ**

(ಕರ್ನಾಟಕ)ಮೈಸೂರಿನ ಜೆ ಎಸ್ ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಲ್ಲಿ (JSS STU) ಅತ್ಯಂತ ಜನಪ್ರಿಯ ವಿದ್ಯಾರ್ಥಿ ಸಾಂಸ್ಕೃತಿಕ ಹಬ್ಬವಾದ 'ಜೇಸಿಯಾನ 2026' (ಎಂಜಅಖಂಓಂ 2026) ಜುಲೈ 6ರ ಸಂಜೆ 6 ಗಂಟೆಗೆ ಉದ್ಘಾಟನೆಗೊಳ್ಳಲಿದೆ. ಕನ್ನಡ ನಟ ವಸಿಷ್ಠ ಎನ್. ಸಿಂಹ ಮತ್ತು ಗಾಯಕ ಚಂದನ್ ಶೆಟ್ಟಿ ಈ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ

## ಸುಭಾಷಿತ

ಜೀವನದಲ್ಲಿ ಎಲ್ಲವನ್ನೂ ಪಡೆಯಲು ಓಡುವುದಕ್ಕಿಂತ, ಇರುವುದನ್ನು ಸಂತೋಷದಿಂದ ಸ್ವೀಕರಿಸಲು ಕಲಿಯಿರಿ. ತೃಪ್ತಿ ಎನ್ನುವುದು ಹಣದಿಂದ ಸಿಗುವುದಿಲ್ಲ ಅದು ಮನಸ್ಸಿನ ಸ್ಥಿತಿಯಿಂದ ಬರುತ್ತದೆ. ತೃಪ್ತಿ ಇರುವವನೇ ನಿಜವಾದ ಶ್ರೀಮಂತ

~ ಸಿದ್ದೇಶ್ವರ ಸ್ವಾಮೀಜಿ

# ಮಾನ್ವಿ ಹೆಡ್ ಕಾನ್‌ಸ್ಟೆಬಲ್ ಇಸ್ಮಾಯಿಲ್ ನಿಧನ : ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ

◆ ನೈಜ್ಯ ದೆಸೆ ನ್ಯೂಸ್

ಮಾನ್ವಿ –: ಮಾನ್ವಿ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ (ಜಮೇದಾರ್) ಇಸ್ಮಯಿಲ್ (43) ಅವರು ಅನಾರೋಗ್ಯದ ಹಿನ್ನೆಲೆಯಲ್ಲಿ ಭಾನುವಾರ ಬೆಳಿಗ್ಗೆ ನಿಧನರಾಗಿದ್ದು, ಸಂಜೆ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು. ಕೆಲವು ದಿನಗಳ ಹಿಂದೆ ಮಾನ್ವಿ ಪಟ್ಟಣದಲ್ಲಿ ನಡೆದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಅವರು ಕೋಮಾ ಸ್ಥಿತಿಗೆ ತಲುಪಿದ್ದರು. ಬಳಿಕ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಅವರು, ನಂತರ ರಾಯಚೂರಿನ ಖಾಸಗಿ ಆಸ್ಪತ್ರೆಯಲ್ಲಿಯೂ ಚಿಕಿತ್ಸೆ ಮುಂದುವರಿಸಿದ್ದರು. ಆರೋಗ್ಯದಲ್ಲಿ ಸ್ವಲ್ಪ ಚೇತರಿಕೆ ಕಂಡು ಮಾನ್ವಿಗೆ ಮರಳಿದ್ದರೂ, ಭಾನುವಾರ ತಮ್ಮ ನಿವಾಸದಲ್ಲೇ ಕೊನೆಯುಸಿರೆಳೆದಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಒಬ್ಬ ಪುತ್ರನನ್ನು ಅಗಲಿದ್ದಾರೆ. ಮಾನ್ವಿಯ ಹುದಾ ಮಸೀದಿಯಲ್ಲಿ ಅವರ ಅಂತ್ಯಸಂಸ್ಕಾರ ನೆರವೇರಿತು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷು ಗಿರಿ ಅವರು ಪೊಲೀಸ್ ಇಲಾಖೆಯ ಪರವಾಗಿ ಸರ್ಕಾರಿ ಗೌರವ





ಸಲ್ಲಿಸಿದರು. ಶಾಸಕ ಹಂಪಯ್ಯ ನಾಯಕ ಅವರು ಮೃತರ ಕುಟುಂಬಕ್ಕೆ ಭೇಟಿ ನೀಡಿ ಸಂತಾಪ ಸೂಚಿಸಿದರು.ಸಿಂಧನೂರು ಗ್ರಾಮೀಣ ಡಿ.ವೈ.ಎಸ್.ಪಿ. ಚಂದ್ರಶೇಖರ್, ಮಾನ್ವಿ ಪಿ.ಐ. ಸೋಮಶೇಖರ್ ಎಸ್.ಕೆಂಚ ರೆಡ್ಡಿ, ಮೃತರ ಸಹೋದರ ಹಾಗೂ ಪುರಸಭೆಯ ಮಾಜಿ ಸದಸ್ಯರಾದ ಮೌಲಾನ ಫರೀದ್ ಉಮ್ರಿ, ಶಾಸಕ ಹಂಪಯ್ಯ ನಾಯಕ್ , ಮಾವನವರಾದ ಅಬ್ದುಲ್ ಕರೀಂ ಸಾಬ್ ಕವಿತಾಳ, ಎಂ ಎ ವಹಾಬ್ , ಸೈಯದ್ ಸಿರಾಜ್ , ಅಜ್ಮೀರ್ ಸಾಬ್, ಗ್ಯಾರಂಟಿ, ಲಾಲ್ ಸಾಬ್ , ಇರ್ಫಾನ್ ಕೆ, ಅಬ್ದುಲ್ ಕಲೀಮ್ , ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಬಿ.ಕೆ. ಅಮರೇಶಪ್ಪ ವಕೀಲರು, ರಾಜ ಸುಭಾಶ್ಚಂದ್ರ ನಾಯಕ್, ಆಂಜನೇಯ ಧಡಿ, ರಾಜು ತಾಳಿಕೋಟಿ, ಆನಂದ್, ಸೈಯದ್ ಅಹಮದ್ ಹುಸೇನಿ ಮತ್ವಾಲೆ, ಹೆಚ್.ಬಿ.ಎಂ ಬಾಷಾ, ನೌಶಾದ್ ಕವಿತಾಳ, ಮೋನು ಕವಿತಾಳ, ಚಾಂದ್ ಪಾಷಾ ಕವಿತಾಳ, ಅಹ್ಮದ್ ಸಿಂಧನೂರು , ನಜೀರ್ ಅಹ್ಮದ್ ಫರಾಜ್ ಮಾನ್ವಿ , ಮಮ್ಮದ್ ಜಾವೀದ್, ಸತ್ತಾರ್ ಬಂಗ್ಲೆವಾಲೆ, ಮಾನ್ವಿ ಪೊಲೀಸ್ ಠಾಣೆಯ ಸಿಬ್ಬಂದಿ ವರ್ಗದವರು ಹಾಗೂ ವಿವಿಧ ಸ್ಥಳಗಳಿಂದ ಆಗಮಿಸಿದ ಅಪಾರ ಬಂಧು ಮಿತ್ರರು ಇದ್ದರು.

# ಗೃಹ ಸಚಿವರಾದ ಬಳಿಕ ಕಲಬುರಗಿಗೆ ಭೇಟಿ: ಪ್ರಿಯಾಂಕ್ ಖರ್ಗೆಗೆ ಅದ್ದೂರಿ ಸ್ವಾಗತ

◆ ನೈಜ್ಯ ದೆಸೆ ನ್ಯೂಸ್

ಕಲಬುರಗಿ :- ರಾಜ್ಯದ ಗೃಹ ಸಚಿವರಾದ ಬಳಿಕ ಇದೇ ಮೊದಲ ಬಾರಿಗೆ ಜಿಲ್ಲೆ ಆಗಮಿಸಿದ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಕಾಂಗ್ರೆಸ್ ಪಕ್ಷದ ನಾಯಕರು, ಮುಖಂಡರು ಹಾಗೂ ಅಭಿಮಾನಿಗಳು ಅದ್ದೂರಿಯಾಗಿ ಭರಮಾಡಿಕೊಂಡರು.ನಗರದ ನೆಹರೂ ಗಂಜ್ ಪ್ರದೇಶದ ನಗರೇಶ್ವರ ಶಾಲೆಯ ಎದುರು ಬಂದಿಳಿದ ಕಲಬುರಗಿ, ಯಾದಗಿರಿ ಜಿಲ್ಲೆಗಳ ಉಸ್ತುವಾರಿ ಸಚಿವರೂ ಆಗಿರುವ ಪ್ರಿಯಾಂಕ್ ಖರ್ಗೆ ಅವರನ್ನು ಮೊದಲಿಗೆ ತೆರೆದ ಕಾರಿನಲ್ಲಿ, ಬಳಿಕ ಸಿಂಗರಿಸಿದ ಲಾರಿಯ ಮೇಲೆ ಏರಿಸಿ ಮೆರವಣಿಗೆ ಮಾಡಲಾಯಿತು.ಬಗೆಬಗೆಯ ಪುಷ್ಪಗಳ ವೃಷ್ಟಿಗೈದು ಸಂಭ್ರಮಿಸಿದರು.ದಾ-



ರಿಯುದ್ದಕ್ಕೂ ಜನರತ್ತ ಕೈ ಬೀಸಿ, ಕೈಮುಗಿದು ಸಚಿವ ಪ್ರಿಯಾಂಕ್ ಖರ್ಗೆ ನಮಿಸುತ್ತಿದ್ದ ದೃಶ್ಯ ಕಂಡು ಬಂತು.ನಗರೇಶ್ವರ ಶಾಲೆಯಿಂದ ಆರಂಭವಾದ ಮೆರವಣಿಗೆಯು ಚೌಕ ವೃತ್ತ, ಸೂಪರ್ ಮಾರ್ಕೆಟ್, ಜಗತ್ ವೃತ್ತ ಮೂಲಕ ಜಿಲ್ಲಾ ಕಾಂಗ್ರೆಸ್ ಕಚೇರಿ ತನಕ ನಡೆಯಿತು. ಹಲಗೆ ವಾದನ, ಬ್ಯಾಂಜೋ ವಾದನಗಳ ಸದ್ದು ನೆರೆದಿದ್ದವರು ಹುಚ್ಚೆದ್ದು ಕುಣಿಯುವಂತೆ ಮಾಡಿತು. ಕಾಂಗ್ರೆಸ್ ಪಕ್ಷದ ಬಾವುಟಗಳು ರಾರಾಜಿಸಿದವು. ಮೆರವಣಿಗೆ ಬರುವ ಹಾದಿಯ ಅಲ್ಲಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು ಚೀಲಗಟ್ಟಲೆ ಹೂವಿನ ಪಕಳೆ ಎರಚಿ, ಬೃಹತ್ ಕ್ರೇನ್ ಗಳ ಮೂಲಕ ಆಳೆತ್ತರದ ಕಟೌಟ್ ಪ್ರದರ್ಶಿಸಿ, ಪಟಾಕಿ ಸಿಡಿಸಿ ಸ್ವಾಗತಿಸಿದ್ದು ವಿಶೇಷವಾಗಿ-ತ್ತು.ಸಚಿವ ಪ್ರಿಯಾಂಕ್ ಖರ್ಗೆ ಅವರೊಂದಿಗೆ ಮೆರವಣಿಗೆಯಲ್ಲಿ ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಸದಸ್ಯರೂ ಆಗಿರುವ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಜಗದೇವ ಗುತ್ತೇದಾರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕುಡಾ ಅಧ್ಯಕ್ಷ ಮಜಹರ್ ಆಲಂ ಖಾನ್ ಸೇರಿದಂತೆ ಹಲವರು ಮೆರವಣಿಗೆಯಲ್ಲಿ ಸಾಥ್ ನೀಡಿದರು.

# ತುಂಗಭದ್ರಾ ಡ್ಯಾಂ ನೀರು ಕುಡಿಯಲು ಮಾತ್ರ; ಬೆಳೆಗಳಿಗೆ ನೀರು ಇಲ್ಲ

◆ ನೈಜ್ಯ ದೆಸೆ ನ್ಯೂಸ್




ಬಳ್ಳಾರಿ, ಜುಲೈ 5: ತುಂಗಭದ್ರಾ ಜಲಾಶಯದಲ್ಲಿ ಸಮರ್ಪಕ ಪ್ರಮಾಣದ ನೀರಿನ ಸಂಗ್ರಹ ಇಲ್ಲದಿರುವ ಹಿನ್ನೆಲೆಯಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನ ಬೆಳೆಗಳಿಗೆ ಜಲಾಶಯದ ಬಲದಂಡೆ ಹಾಗೂ ಎಡದಂಡೆ ನಾಲೆಗಳ ಮೂಲಕ ನೀರು ಹರಿಸಲು ಸಾಧ್ಯವಾಗುವುದಿಲ್ಲ ಎಂದು ತುಂಗಭದ್ರಾ ಯೋಜನೆ ಮತ್ತು ವಿಜಯನಗರ ಕಾಲುವೆಗಳ ನೀರಾವರಿ ಸಲಹಾ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಅಧೀಕ್ಷಕ ಎಂಜಿನಿಯರ್ ಎಸ್. ಬಿ. ಮಲ್ಲಿಗವಾಡ ತಿಳಿಸಿದ್ದಾರೆ.ತುಂಗಭದ್ರಾ ಜಲಾನಯನ ಪ್ರದೇಶದಲ್ಲಿ ಈ ಬಾರಿ ಮಳೆ ತೀವ್ರವಾಗಿ ಕೊರತೆಯಾಗಿರುವುದ-ರಿಂದ ಜಲಾಶಯಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ನೀರಿನ ಹ-ರಿವು ಬಂದಿಲ್ಲ. ಪರಿಣಾಮವಾಗಿ ಜಲಾಶಯದಲ್ಲಿನ ನೀರಿನ ಸಂಗ್ರಹ ಅತ್ಯಂತ ಕಡಿಮೆಯಾಗಿದೆ. ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಜಲಾಶಯದಲ್ಲಿರುವ ಲಭ್ಯ ನೀರನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ಬಳಸುವಂತೆ ನಿರ್ದೇಶನ ನೀಡಿದೆ.ಈ ಹಿನ್ನೆಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ನೀರಾವರಿ ಉದ್ದೇಶಕ್ಕಾಗಿ ಕಾಲುವೆಗಳಿಗೆ ನೀರು ಬಿಡುಗಡೆ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿರುವ ಅಧಿಕಾರಿಗಳು, ಅಚ್ಚುಕಟ್ಟು ಪ್ರದೇಶದ ರೈತರು ಇಲಾಖೆಯೊಂದಿಗೆ ಸಹಕರಿಸುವಂತೆ ಮನವಿ ಮಾಡಿದ್ದಾರೆ. ಆದರೆ, ಮುಂದಿನ ದಿನಗಳಲ್ಲಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗಿ ಜಲಾಶಯ ಸಮರ್ಪಕವಾಗಿ ಭರ್ತಿಯಾದಲ್ಲಿ, ನೀರಾವರಿ ಸಲಹಾ ಸಮಿತಿಯ ಸಭೆ ಕರೆಯಲಾಗುವುದು. ಬಳಿಕ ಪರಿಸ್ಥಿತಿಯನ್ನು ಪರಿಶೀಲಿಸಿ ಬೆಳೆಗಳಿಗೆ ನೀರು ಬಿಡುಗಡೆ ಮಾಡುವ ಕುರಿತು ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.ಜಲಾಶಯದ ನೀರಿನ ಕೊರತೆಯಿಂದ ಅಚ್ಚುಕಟ್ಟು ಪ್ರದೇಶದ ರೈತರು ಆತಂಕಕ್ಕೊಳಗಾಗಿದ್ದು, ಉತ್ತಮ ಮಳೆಯ ನಿರೀಕ್ಷೆಯಲ್ಲಿದ್ದಾರೆ.

# "ಅವೈಜ್ಞಾನಿಕ ಜಿಪಿಎಸ್ ಮಾಡಿದ ಅಧಿಕಾರಿಗಳ ತರಾಟೆ"

## ಕವಿತಾಳದಲ್ಲಿ ರಸ್ತೆ ಕಾಮಗಾರಿಗಳಿಗೆ ಚಾಲನೆ, ಗುಣಮಟ್ಟ ಕಾಯ್ದುಕೊಳ್ಳಲು ಸಚಿವ ಬೋಸರಾಜು ಸೂಚನೆ

◆ ನೈಜ್ಯ ದೆಸೆ ನ್ಯೂಸ್

ಕವಿತಾಳ –: ಅಭಿವೃದ್ಧಿ ಕಾಮಗಾರಿಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಬೇಕು ಎಂದು ಮಾಜಿ ಸಚಿವ ಎನ್.ಎಸ್. ಬೋಸರಾಜು ಅಧಿಕಾರಿಗಳಿಗೆ ಸೂಚನೆ ನೀಡಿದರು. ಪಟ್ಟಣದಲ್ಲಿ ಶನಿವಾರ ವಿವಿಧ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.ಇಲ್ಲಿನ ಶಿವಪ್ಪ ತಾತನ ಮಠದಿಂದ ಅಗಸಿಯವರೆಗೆ ರೂ. 45 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣ ಕಾಮಗಾರಿ ಹಾಗೂ 13ನೇ ವಾಡ್ 9ನ ಈರಣ್ಣ ಅವರ ಮನೆಯಿಂದ ವೆಂಕಟೇಶ ಗಚ್ಚಿನಮನಿ ಅವರ ಮನೆಯವರೆಗೆ ರೂ. 20 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದರು.ಉತ್ತಮ ಸ್ಥಿತಿಯಲ್ಲಿರುವ ರಸ್ತೆಯ ದುರಸ್ತಿಗೆ 50 ಲಕ್ಷ ರೂ. ವೆಚ್ಚದಲ್ಲಿ ಮತ್ತೊಂದು ರಸ್ತೆ ನಿರ್ಮಿಸಲು ಅಧಿ ಕಾರಿಗಳು ಅವೈಜ್ಞಾನಿಕವಾಗಿ ಜಿಪಿಎಸ್ ಮಾಡಿರುವುದು ಬೆಳಕಿಗೆ ಬಂದಿದೆ. ಅಧಿಕಾ-ರಿಗಳು ರಸ್ತೆ ನಿರ್ಮಾಣಕ್ಕೆ ತೋರಿಸಿದ ಜಾಗ ಒಂದು ಕಡೆಯಾದರೆ, ಜಿಪಿಎಸ್ ಮಾಡಿದ ಜಾಗವೇ ಬೇರೆಯಾಗಿತ್ತು. ಅದನ್ನು ಗಮನಿಸಿದ ಸಚಿವರು ಸ್ಥಳದಲ್ಲೇ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರಲ್ಲದೆ ಕಾಮಗಾ-ರಿಗೆ ಭೂಮಿ ಪೂಜೆ ಮಾಡದೆಯೇ ಅಲ್ಲಿಂದ ವಾಪಸಾದರು.ಹಳ್ಳಿ ಹೊಸೂರು ಗ್ರಾಮದಲ್ಲಿ ಮಾನ್ವಿ-ಸಿರವಾರ ಮುಖ್ಯ ರಸ್ತೆಯಿಂದ ಹಳ್ಳಿ ಹೊಸೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸಿಸಿ ರಸ್ತೆಯ ನಿರ್ಮಾಣಕ್ಕೆ 50ಲಕ್ಷ ರೂಪಾಯಿ, ಹಳ್ಳಿ ಹೊಸೂರು ಕ್ಯಾಂಪ್ (ಬಾಜಿರಡ್ಡಿ)



ಕ್ಯಾಂಪ್ ನಲ್ಲಿ ಆಂಜಿನಯ್ಯ ದೇವಸ್ಥಾನದ ಸಮುದಾಯ ಭವನಕ್ಕೆ 10 ಲಕ್ಷ ರೂ.ಗಳ ಶಿಲಾನ್ಯಾಸ ನೆರವೇರಿಸಿದರು.ಕಾಮಗಾರಿ ವಿಳಂಬವಾದರೆ ಗ್ರಾಮೀಣ ಪ್ರದೇಶಗಳಲ್ಲಿ ಜನರ ಓಡಾಟಕ್ಕೆ ತೊಂದರೆ ಉಂಟಾಗುತ್ತದೆ, ಯಾವುದೇ ತೊಂದರೆಯಾಗದಂತೆ ಎಚ-ರಿಕೆಯಿಂದ ಕಾಮಗಾರಿ ಪೂರ್ಣಗೊಳಿಸಲು ಕೆಆರ್ ಐಡಿ ಎಲ್ ಜೆಇ ರಾಘವೇಂದ್ರ ಅವ-ರಿಗೆ ಸೂಚಿಸಿದರು.ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವರು ರಸ್ತೆ ಕಾಮಗಾರಿ ಭೂಮಿ ಪೂಜೆ ಸಂದರ್ಭದಲ್ಲಿ ತಾಂತ್ರಿಕ ಸಮಸ್ಯೆ ಎದುರಾಗಿದೆ ಪ್ರತಿಯೊಬ್ಬರೂ ಕಡ್ಡಾಯವಾಗಿ ಮತದಾರರ "ಪಟ್ಟಿ ಪರಿಷ್ಕರಣೆ ಮಾಡಿಸಿಕೊಳ್ಳಬೇಕು. ಹೊಸ ವೋಟರ್ ಐಡಿ ಲಿಸ್ಟ್‌ನಲ್ಲಿ ಹೆಸರು ಬಂದರೆ ಮಾತ್ರ ನೀವು ಮತದಾನ ಮಾಡಲು ಅರ್ಹರಾಗುತ್ತೀರಿ, ಉದ್ಯೋಗಕ್ಕಾಗಿ ನಗರಗಳಿಗೆ ವಲಸೆ ಹೋಗಿರುವ ಸ್ಥಳೀಯರು ತಕ್ಷಣ ಊರಿಗೆ ಬಂದು ತಮ್ಮ ಎಸ್.ಐ.ಆರ್ ಪರಿಷ್ಕರಣೆ ಮಾಡಿಸಿಕೊಳ್ಳಬೇಕು ಎಂದು ಸೂಚಿಸಿದರು. ಕೆಲವು ಪತ್ರಿಕೆಗಳಲ್ಲಿ ಕಾಮಗಾರಿಗಳು ಕಳಪೆಯಾಗಿವೆ ಹಾಗೂ ಇದಕ್ಕೆ ಮಾಜಿ ಸಚಿವರು ಮತ್ತು ಶಾಸಕರ ನಿರ್ಲಕ್ಷ್ಯವೇ ಕಾರಣ ಎಂದು ವರದಿಯಾಗಿರುವುದನ್ನು ಅವರು ತಳ್ಳಿ ಹಾಕಿದರು. ನಾವು ಇದುವರೆಗೆ ಯಾವುದೇ ಅಭಿವೃದ್ಧಿ ಕೆಲಸಗಳಲ್ಲಿ ನಿರ್ಲಕ್ಷ್ಯ ವಹಿಸಿಲ್ಲ. ಒಂದು ವೇಳೆ ಎಲ್ಲಾದರೂ ಕಳಪೆ ಕಾಮಗಾರಿಯಾಗಿದ್ದರೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ. ಸರ್ಕಾರದ ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಲು ಯಾ-ರಿಗೂ ಅಧಿಕಾರವಿಲ್ಲ ಎಂದು ಸ್ಪಷ್ಟಪಡಿಸಿದರು. ಜಿಲ್ಲೆಯಾದ್ಯಂತ ಅನೇಕ ಅಭಿವೃದ್ಧಿ ಕೆಲಸಗಳು ಪ್ರಗತಿಯಲ್ಲಿದ್ದು, ಕವಿತಾಳ ಪಟ್ಟಣದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕೆಲಸಗಳಿಗೆ ಬೇಡಿಕೆ ಇದೆ ಮುಂದಿನ ದಿನಗಳಲ್ಲಿ ಅವುಗಳ ಈಡೇರಿಕೆಗೆ ಅಗತ್ಯ ಕ್ರಮ ವಹಿಸಲಾಗುವುದು ಎಂದರು.ರೈತರ ಬೆಳೆ ಪರಿಹಾರದ ಕುರಿತು ಮಾತನಾಡಿದ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಂಟಿ ಸಮೀಕ್ಷೆ ನಡೆಸುತ್ತಿವೆ. ಸಮೀಕ್ಷೆ ವರದಿ ಬಂದ ನಂತರ ಕೇಂದ್ರ ಹಾಗೂ ರಾಜ್ಯ ಮಟ್ಟದಲ್ಲಿ ಚರ್ಚಿಸಿ ಶೀಘ್ರದಲ್ಲೇ ಪರಿಹಾರ ಘೋಷಣೆ ಮಾಡಲಾಗುವುದು ಎಂದರು.ಈ ಸಂದರ್ಭದಲ್ಲಿ ಶಾಸಕ ಜಿ.ಹಂಪಯ್ಯ ನಾಯಕ, ಮುಖಂಡರಾದ ಶಿವುಕುಮಾರ ಚುಕ್ಕಿ ಸಿರವಾರ, ಕಿರಲಿಂಗಪ್ಪ, ಶೇಖರಪ್ಪ ಸಾಹುಕಾರ ಹಟ್ಟಿ, ಶಿವಣ್ಣ ವಕೀಲ, ಮಾಳಪ್ಪ ತೋಳ, ಬ್ರಿಜೇಶ್ ಪಾಟೀಲ್, ಗಂಗಪ ದಿನ್ನಿ, ಅಯ್ಯಪ್ಪ ನೀಲಗಲ್, ತಿಪ್ಪಯ್ಯ ಸ್ವಾಮಿ, ಚಾಂದ್ ಪಾಷ್, ಕೆ. ಶರಣಯ್ಯ ನಾಯಕ ಗುಡದಿನ್ನಿ, ಕರಿಯಪ್ಪ ಅಡೇದ್, ಮೌನೇಶ ಹಿರೇಕುರಬರು, ಓವಣ್ಣ, ಸೈಯದ್ ರಹಿಮುದ್ದಿನ್ ದಣಿ, ಅಮರೇಶ ಕಟ್ಟಿಮನಿ, ಸಣ್ಣ ಕರಿಯಪ್ಪ ಮಡಿವಾಳ, ನರಸಪ್ಪ, ರುದ್ರಪ್ಪ ಅಂಗಡಿ, ಚುಕ್ಕಿ ಶಿವಕುಮಾರ, ಆಹಾರ ಇಲಾಖೆಯ ನಿವೃತ್ತ ಅಧಿಕಾರಿ ಶಿವಪ್ಪಗೌಡ ಹಳ್ಳಿಹೊಸೂರು, ಅತ್ತನೂರು ಶಿವಕುಮಾರ್, ಲಿಂಗಪ್ಪ, ಚಂದ್ರಪ್ಪಗೌಡ ಬಸವರಾಜಗೌಡ ಮಾಡಗಿರಿ, ತಿಮ್ಮಪ್ಪ, ಚಿನ್ನಪ್ಪ, ಬಸಯ್ಯಸ್ವಾಮಿ, ಕೆ.ಶರಣಪ್ಪ, ಜಯವಂತ, ಬಾಲಪ್ಪ ಹುಸೇನ್ ಸಾಬ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಸಾಹಿತ್ಯ ಸಿಂಚನ

### ಬದುಕು ಜಟಕಾ ಬಂಡಿ

ಬದುಕು ಅಂದ್ರೆ ಜಟಕಾ ಬಂಡಿ
ಏರಿಳಿತದ ದಾರಿಯಲ್ಲಿ ಸಾಗೋ ಗಾಡಿ
ಕೆಲವೊಮ್ಮೆ ಕುದುರೆ ಜೋರಾಗಿ ಓಡುತ್ತೆ
ಕೆಲವೊಮ್ಮೆ ಚಕ್ರ ಹೂತು ನಿಂತಿರುತ್ತೆ

ಹಳ್ಳ ತಗ್ಗು ಬಂದ್ರೆ ಕುಲುಕಿ ಬಿಡುತ್ತೆ
ಸವಾರಿ ಮಾಡೋ ನಮಗೆ ತಲೆ ತಿರುಗುತ್ತೆ
ಹಿಡಿಯೋ ಲಗಾಮು ಕೈಗೆ ಸಿಗೋದಿಲ್ಲ
ಬೀಳೋ ಭಯ, ಆದ್ರೆ ಇಳಿಯೋ ಹಾಗೂ ಇಲ್ಲ

ಕಷ್ಟ ಬಂದ್ರೆ ಗಾಡಿ ಭಾರ ಆಗುತ್ತೆ
ಕುದುರೆನೂ ಸುಸ್ತಾಗಿ ನಿಧಾನ ಆಗುತ್ತೆ
ಆದ್ರೆ ನಿಲ್ಲಿಸೋ ಹಾಗಿಲ್ಲ
ಮುಂದೆ ಸಾಗಲೇಬೇಕು, ಇದೇ ಜಟಕಾ ನಿಯಮ

ಖುಷಿ ಬಂದ್ರೆ ಗಾಡಿ ಹಗುರ ಆಗುತ್ತೆ
ಗಾಳಿಗೆ ತೇಲಿದಂಗೆ ಸಾಗುತ್ತೆ
ಆ ಕ್ಷಣ ಜೀವನ ಸ್ವರ್ಗ ಆಗುತ್ತೆ
ಆದ್ರೆ ಅದು ಹೆಚ್ಚು ಹೊತ್ತು ಇರೋದಿಲ್ಲ

ಈ ಜಟಕಾ ಬಂಡಿಯಲ್ಲಿ ಎಲ್ಲ ಇದ್ದಾರೆ
ದುಃಖ, ನೋವು, ನಗು, ನೆನಪು
ಕೆಲವರು ದಾರಿ ಮಧ್ಯೆ ಇಳಿದು ಹೋಗ್ತಾರೆ
ಹೊಸಬರು ಹತ್ತಿ ಜೊತೆಗೆ ಬರ್ತಾರೆ

ಸವಾರಿ ಮಾಡೋ ನಾವೇ ಮಾಲೀಕ
ಆದ್ರೆ ದಾರಿ ನಮ್ಮ ಕೈಲಿ ಇಲ್ಲ
ಹೋಗಬೇಕಾದ ಜಾಗ ಗೊತ್ತಿಲ್ಲ
ಆದ್ರೂ ಹೊರಟಿದ್ದೀವಿ, ನಿಲ್ಲೋದಿಲ್ಲ

ಹಾಗಾಗಿ ಗುರು, ಅಳೋದು ಬೇಡ
ಈ ಜಟಕಾ ಬಂಡಿ ನಿಂತರೆ ಸಾವು
ಕುಲುಕಿದ್ರೂ ಕೂತಿರು ಗಟ್ಟಿಯಾಗಿ
ಒಂದು ದಿನ ಗುರಿ ಸೇರುತ್ತೆ ಈ ಗಾಡಿ

ಕಷ್ಟ ಬಂದ್ರೆ ಕುದುರೆಗೆ ನೀರು ಕುಡಿಸು
ಖುಷಿ ಬಂದ್ರೆ ಹಾಡು ಹೇಳಿಕೊಂಡು ಹೋಗು
ಜೀವನ ಅಂದ್ರೆ ಇದೇ
ಏರಿಳಿತ ಇದ್ರೆನೇ ಬದುಕಿಗೆ ರುಚಿ

ಎಸ್.ದುರಗಪ್ಪ.ಕುಷ್ಟಗಿ.

# ಹಂಪನಗೌಡ ಬಾದರ್ಲಿ ಅಭಿಮಾನಿಗಳಿಂದ ಕಾರುಣ್ಯಾಶ್ರಮದಲ್ಲಿ ಮಹಾಪ್ರಸಾದ ಸೇವೆ ಸುಡಾ ಅಧ್ಯಕ್ಷರಾದ ಬಾಬುಗೌಡ ಬಾದರ್ಲಿ ಅವರಿಂದ ಕಾರುಣ್ಯಾಶ್ರಮದಲ್ಲಿ ಅನ್ನ ಸಂತರ್ಪಣೆ

ನೈಜ್ಯ ದೆಸೆ ನ್ಯೂಸ್

ಸಿಂಧನೂರು – ಹಂಪನಗೌಡ ಬಾದರ್ಲಿ ಅಭಿಮಾನಿ ಬಳಗ ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರ (ಸುಡಾ) ಅಧ್ಯಕ್ಷರಾದ ವೆಂಕನಗೌಡ (ಬಾಬುಗೌಡ) ಬಾದರ್ಲಿ ಇವರ ನೇತೃತ್ವದಲ್ಲಿ ಹಂಪನಗೌಡ ಬಾದರ್ಲಿ ಅವರಿಗೆ ಡಿ. ಕೆ. ಶಿವಕುಮಾರ ಸಂಪುಟದಲ್ಲಿ ಸಚಿವ ದೊರೆಯಲಿ ಎನ್ನುವ ವಿಶೇಷ ಸಂಕಲ್ಪದೊಂದಿಗೆ ಆಶ್ರಮದಲ್ಲಿ ವಿವಿಧ ಬಗೆಯ ಮಹಾಪ್ರಸಾದ ಸೇವೆಯನ್ನು ಸಲ್ಲಿಸಿ ಪ್ರಾರ್ಥನೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ನಮ್ಮ ಸಿಂಧನೂರಿನ ಜನಪ್ರಿಯ ಶಾಸಕರು ಹಿರಿಯ ಅನುಭವಿ ರಾಜಕಾರಣಿಗಳು ಹಾಗೂ ಐದು ಬಾರಿ ಶಾಸಕರಾಗಿ ಆಯ್ಕೆಯಾದ ಹಂಪನಗೌಡ ಬಾದರ್ಲಿಯವರಿಗೆ ಡಿ.ಕೆ. ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವ ಸ್ಥಾನ ದೊರೆಯಬೇಕೆಂಬುದು ಸಿಂಧನೂರಿನ ಜನತೆಯ ಆಶಯವಾಗಿದೆ. ಅವರ ನಿರಂತರ ಜನ ಪರ ಕಾರ್ಯಗಳು ಮತ್ತು ತಾಲೂಕಿನ ಅಭಿವೃದ್ಧಿ ಮತ್ತು ರೈತರ ಕಾಳಜಿಯ ಅಂಶಗಳನ್ನು ಗಮನದಲ್ಲಿಟ್ಟುಕೊಂಡು



ಹಂಪನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡಬೇಕು. ಕಲ್ಯಾಣ ಕರ್ನಾಟಕದಲ್ಲಿ ಹಿರಿಯ ಶಾಸಕರಾಗಿ ಎ.ಐ.ಸಿ.ಸಿ. ಯ ರಾಷ್ಟ್ರೀಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಆಕ್ತರಾಗಿ ಅವರ ಆದರ್ಶ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿರುವ ನಮ್ಮ ಶಾಸಕರು ಸಚಿವರಾದರೆ ನಮ್ಮ ಸಿಂಧನೂರು ತಾಲೂಕು ಸಮಗ್ರ ಅಭಿವೃದ್ಧಿಯಾಗುತ್ತದೆ. ಮತ್ತು ನಮ್ಮ ಕಾರುಣ್ಯ ಆಶ್ರಮಕ್ಕೆ ಸ್ವಂತ ಜಾಗ ಹಾಗೂ ಅನುದಾನ ದೊರೆಯಬಹುದು ಎನ್ನುವುದು ನಮ್ಮ ಸಂಸ್ಥೆಯ ಆಶಯವಾಗಿದೆ. ಇಂದಿನ ಈ ಕಾರ್ಯಕ್ರಮದಲ್ಲಿ ನಾವೆಲ್ಲರೂ ಕೂಡ ಸಕಲ ದೇವಾನುದೇವತೆಗಳಲ್ಲಿ ವಿಶೇಷ ಪ್ರಾರ್ಥನೆ ಮಾಡುವುದರ ಮೂಲಕ ಹಂಪನಗೌಡ ಬಾದರ್ಲಿ ಅವರಿಗೆ ರಾಜ್ಯ ಸರ್ಕಾರದಲ್ಲಿ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ದೊರೆಯಲಿ ಎನ್ನುವ ವಿಶೇಷ ಪ್ರಾರ್ಥನೆಯೊಂದಿಗೆ ಹಂಪನಗೌಡ ಬಾದರ್ಲಿ ಅವರಿಗೂ ಮತ್ತು ಅವರ ಕುಟುಂಬ ಹಾಗೂ ಅಭಿಮಾನಿಗಳಿಗೆ ಅಂತರಾಳದ ಮೂಲಕ ಆಶೀರ್ವದಿಸುತ್ತಿದ್ದೇನೆ ಎಂದು ಮಾತನಾಡಿ. ಹಂಪನಗೌಡ ಬಾದರ್ಲಿ ಅವರಿಗೆ ಶುಭ ಕೋರಿದರು. ಈ ಸಂದರ್ಭದಲ್ಲಿ ಸುಡಾ ಅಧ್ಯಕ್ಷರಾದ ಬಾಬುಗೌಡ ಬಾದರ್ಲಿ ಅವರು ನಾವು ಹಾಗೂ ನಮ್ಮ ಕುಟುಂಬ ಮತ್ತು ನಮ್ಮೆಲ್ಲಾ ಕಾರ್ಯಕರ್ತರುಗಳು ಪ್ರಾಮಾಣಿಕ ಸಂಸ್ಥೆಯಾದ ನಮ್ಮ ಊರಿನ ಕಾರುಣ್ಯ ಆಶ್ರಮಕ್ಕೆ ಯಾವಾಗಲೂ ಜೊತೆಗಿರುತ್ತೇವೆ. ಹಂಪನಗೌಡ ಬಾದರ್ಲಿ ಅವರು ಸಚಿವರಾದರೆ ಆಶ್ರಮಕ್ಕೆ ಸಿಗುವ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ಒದಗಿಸುತ್ತೇವೆ. ಆಶ್ರಮದ ಪ್ರತಿಯೊಬ್ಬ ಆಶ್ರಯದಾತರುಗಳ ಆಶೀರ್ವಾದ ನಮ್ಮ ಶಾಸಕರ ಮೇಲಿರಲಿ ಸಮಾಜದ ಒಳಿತಿಗಾಗಿ ನಮ್ಮ ಕುಟುಂಬ ನಿರಂತರ ಜೊತೆಗಿರುತ್ತದೆ ಎಂದು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಈ ಸಮಯದಲ್ಲಿ ಆಶ್ರಮದ ಸದಸ್ಯರಾದ ಸುಜಾತ ಹಿರೇಮಠ. ಮೇಲ್ವಿಚಾರಕರಾದ ಹನುಮಂತಪ್ಪ ನಿವೃತ್ತ ಎ. ಎಸ್. ಐ. ಮಸ್ಕಿಮತ್ತು ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ ಹಾಗೂ ಹಂಪನಗೌಡ ಬಾದರ್ಲಿ ಅಪಾರ ಅಭಿಮಾನಿಗಳು ಉಪಸ್ಥಿತರಿದ್ದರು

# ಜಾಲಹಳ್ಳಿ ಗ್ರಾಮ ಪಂಚಾಯತ್‌ನಲ್ಲಿ ಮತದಾರರ ಮಾಹಿತಿ ಕೇಂದ್ರ ಆರಂಭ; ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಗೆ ಚಾಲನೆ

ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ, ಜುಲೈ 4: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯತ್ ಕಾರ್ಯಾಲಯದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸ್ವೀಪ್ (ಖಗಿಇಇಕ) ಸಮಿತಿಯ ಸಂಯುಕ್ತ ಆಶ್ರಯದಲ್ಲಿ ಮತದಾರರ ಮಾಹಿತಿ ಕೇಂದ್ರ (Voter Facilitation Centre) ಆರಂಭಿಸಿ, ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (SSR) ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಲಕ್ಷ್ಮಿ ಅವರು, ಮತದಾರರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಮಾಹಿತಿ ಕೇಂದ್ರವನ್ನು ಆರಂಭಿಸಲಾಗಿದೆ ಎಂದು ತಿಳಿಸಿದರು. ಹೊಸದಾಗಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ಹೆಸರು ತಿದ್ದುಪಡಿ, ಹೆಸರು ಕೈಬಿಡುವಿಕೆ ಸೇರಿದಂತೆ ಮತದಾರರ ಪಟ್ಟಿಗೆ




ಸಂಬಂಧಿಸಿದ ವಿವಿಧ ಸೇವೆಗಳ ಕುರಿತು ಸಾರ್ವಜನಿಕರಿಗೆ ಸೂಕ್ತ ಮಾಹಿತಿ ನೀಡಲಾಗುವುದು ಎಂದು ಹೇಳಿದರು. ಅರ್ಹ ಯುವ ಮತದಾರರು ಹಾಗೂ ಸಾರ್ವಜನಿಕರು ಮಾಹಿತಿ ಕೇಂದ್ರಕ್ಕೆ ಭೇಟಿ ನೀಡಿ ಇದರ ಸದುಪಯೋಗ ಪಡೆದುಕೊಳ್ಳಬೇಕು. ಜೊತೆಗೆ, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವುದನ್ನು ಕಡ್ಡಾಯವಾಗಿ ಪರಿಶೀಲಿಸಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು. ಜಾಲಹಳ್ಳಿಯ ರಂಗನಾಥ ದೇವಸ್ಥಾನ ಹಾಗೂ ಅಂಬೇಡ್ಕರ್ ವೃತ್ತ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಗ್ರಾಮ ಪಂಚಾಯತ್ ವತಿಯಿಂದ ಹೊಸದಾಗಿ ಆರಂಭಿಸಿರುವ ಮತದಾರರ ಮಾಹಿತಿ ಕೇಂದ್ರದ ಕುರಿತು ಜಾಗೃತಿ ಪ್ರಚಾರವೂ ನಡೆಸಲಾಯಿತು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಸದಸ್ಯ ಅಬ್ದುಲ್ ರೆಹಮಾನ್ ಖುರೇಷಿ ಮಾತನಾಡಿ, ಪ್ರತಿಯೊಬ್ಬ ಅರ್ಹ ನಾಗರಿಕರೂ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಖಚಿತಪಡಿಸಿಕೊಂಡು ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಲಕ್ಷ್ಮಿ, ಗ್ರಾಮ ಪಂಚಾಯತ್ ಕಾರ್ಯದರ್ಶಿ ಅಯ್ಯಪ್ಪ, ಗ್ರಾಮ ಪಂಚಾಯತ್ ಸದಸ್ಯ ಅಬ್ದುಲ್ ರೆಹಮಾನ್ ಖುರೇಷಿ, ಗ್ರಾಮ ಪಂಚಾಯತ್ ಸಿಬ್ಬಂದಿಗಳಾದ ಮುದುರಂಗಪ್ಪ, ಬಸವರಾಜ್, ರಂಗಪ್ಪ ಹಾಗೂ ಸಿಬ್ಬಂದಿ ವರ್ಗದವರು, ಸ್ವೀಪ್ ಸಮಿತಿಯ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

"ಕುಡಿಯುವ ನೀರಿನ ಟ್ಯಾಂಕ್ ಹಾನಿ ಕ್ರಮಕ್ಕೆ ಒತ್ತಾಯ"

## ಖಾಸಗಿ ವ್ಯಕ್ತಿಯೊಬ್ಬರು ಕುಡಿಯುವ ನೀರಿನ ಟ್ಯಾಂಕ್ ಹಾನಿ ಮಾಡಿದ್ದಾರೆ.

ನೈಜ್ಯ ದೆಸೆ ನ್ಯೂಸ್



ಮಸ್ಕಿ –: ಪುರಸಭೆಯ 23ನೇ ವಾರ್ಡ್ ವ್ಯಾಪ್ತಿಯಲ್ಲಿ ಸಿ.ಎ ನಿವೇಶನದಲ್ಲಿದ್ದ ಸಾರ್ವಜನಿಕ ನೀರಿನ ಟ್ಯಾಂಕ್‌ಅನ್ನು ಖಾಸಗಿ ವ್ಯಕ್ತಿಯೊಬ್ಬರು ನೆಲಸಮಗೊಳಿಸಲು ಯತ್ನಿಸಿದ್ದು ಸ್ಥಳೀಯ ನಿವಾಸಿಗಳ ಆಕ್ರೋಶಕ್ಕೆ ಕಾರಣವಾಗಿದೆ.23ನೇ ವಾರ್ಡ್ ಸಿ.ಎ ಸೈಟ್‌ನಲ್ಲಿ ನಿವಾಸಿಗಳ ಕುಡಿಯುವ ನೀರಿನ ಅನುಕೂಲಕ್ಕಾಗಿ ಟ್ಯಾಂಕ್ ನಿರ್ಮಿಸಲಾಗಿತ್ತು. ಆದರೆ, ಆ ಜಾಗದ ಮಾಲೀಕತ್ವದ ನೆಪವೊಡ್ಡಿ ಖಾಸಗಿ ವ್ಯಕ್ತಿಯೊಬ್ಬರು ಜೆಸಿಬಿ ಬಳಸಿ ಟ್ಯಾಂಕ್ ಸಂಪೂರ್ಣವಾಗಿ ನೆಲಸಮ ಮಾಡಲು ಮುಂದಾಗಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ ಸ್ಥಳೀಯರು ತಡೆ ಹಿಡಿದಿದ್ದಾರೆ.ಸಾರ್ವಜನಿಕ ಆಸ್ತಿ: ಸಿ.ಎ ಸೈಟ್‌ಗಳು ನಿಯಮಾವಳಿಗಳ ಪ್ರಕಾರ ಸಾರ್ವಜನಿಕ ಸೌಲಭ್ಯಗಳಿಗೆ ಮೀಸಲಾಗಿರುತ್ತವೆ. ಅಲ್ಲಿನ ಮೂಲಸೌಕರ್ಯವನ್ನು ಧ್ವಂಸಗೊಳಿಸಿರುವುದು ಕಾನೂನು ಬಾಹಿರ ಎಂಬುದು ನಾಗರಿಕರ ವಾದ.ಸಾರ್ವಜನಿಕ ಆಸ್ತಿ ಹಾಳು ಮಾಡಲು ಯತ್ನಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಿದ್ದರೆ ಪುರಸಭೆ ಕಾರ್ಯಾಲಯದ ಮುಂದೆ ಪ್ರತಿಭಟನೆ ನಡೆಸುವುದಾಗಿ ನಾಗರಿಕರು ಎಚ್ಚರಿಸಿದ್ದಾರೆ..

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
9902277588 9880707587 9008787586

# ಅಪಘಾತದಲ್ಲಿ ಮೃತಪಟ್ಟ ಕುಟುಂಬಕ್ಕೆ ಪರಿಹಾರ ವಿಳಂಬ ಸರ್ಕಾರಿ ಬಸ್ ಜಪ್ತಿ – ಬಿಡುಗಡೆ

ನೈಜ್ಯ ದೆಸೆ ನ್ಯೂಸ್

ಅಪಘಾತದಲ್ಲಿ ಮೃತಪಟ್ಟ ಬೈಕ್ ಸವಾರನ ಕುಟುಂಬಕ್ಕೆ ನ್ಯಾಯಾಲಯ ಆದೇಶಿಸಿದರೂ ಪರಿಹಾರ ನೀಡದ ಕೆಕೆಆರ್ ಟಿಸಿ ಬಸ್ ಅನ್ನು ಪಟ್ಟಣದ ಬಸ್ ನಿಲ್ದಾಣದಲ್ಲಿ ಕೋರ್ಟ್ ಸಿಬ್ಬಂದಿ ಜಪ್ತಿ ಮಾಡಿದರು. 2001ರಲ್ಲಿ ಮಸ್ಕಿ ಪಾಂಡುರಂಗ ಕ್ಯಾಂಪ್ ಬಳಿ ಯಾದಗಿರಿ ಕಲ್ಯಾಣ ಸಾರಿಗೆ ಘಟಕಕ್ಕೆ ಸೇರಿದ ಬಸ್ ಬೈಕ್ ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಉಮೇಶ ಎನ್ನುವವರು ಸಾವಿಗೀಡಾಗಿದ್ದರು. ಪರಿಹಾರಕ್ಕಾಗಿ ಕುಟುಂಬದವರು ಲಿಂಗಸಗೂರು ಜೆ ಎಂ ಎಫ್ ಸಿ ಕೋರ್ಟ್ ನಲ್ಲಿ ದಾವೆ ಹೂಡಿದ್ದರು. ಜೆ ಎಂ ಎಫ್ ಸಿ ಹಿರಿಯ ಸಿವಿಲ್ ನ್ಯಾಯಾಧೀಶರು 66,99,675 ರೂ. ಪರಿಹಾರ ಮೊತ್ತ,




8,37,450 ರೂ. ಬಡ್ಡಿ, 7525 ರೂ. ಇತರೆ ವೆಚ್ಚ ಸೇರಿ 75,44,650 ರೂ. ನೀಡಬೇಕೆಂದು ಸೂಚಿಸಿದ್ದರು. ಆದರೆ, ಕೆಕೆಆರ್‌ಟಿಸಿ ವಿಳಂಬ ಮಾಡಿದ್ದರಿಂದ ನ್ಯಾಯಾಲಯವು ಬಸ್ ಜಪ್ತಿ ವಾರೆಂಟ್ ಹೊರಡಿಸಿತ್ತು. ಹೀಗಾಗಿ ಕೋರ್ಟ್ ಬೇಲಿಫ್ ಮಾನಪ್ಪ. ಬಿ ಲಿಂಗಸಗೂರು ಬಸ್ ನಿಲ್ದಾಣಕ್ಕೆ ಬಂದು ಯಾದಗಿರಿ ಘಟಕದ (ಕೆಎ 33 ಎಫ್ 0638) ಬಸ್ ವಶಪಡಿಸಿಕೊಂಡು ಪರಿಹಾರ ನೀಡುವಲ್ಲಿ ವಿಳಂಬ ಮಾಡಿದ ಕೆಕೆಆರ್ ಟಿಸಿ ಯಾದಗಿರಿ ಘಟಕದ ಬಸ್ ಜಪ್ತಿ ಮಾಡಿ ನ್ಯಾಯಾಲಯಕ್ಕೆ ಒಪ್ಪಿಸಿದರು. ನಂತರ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಮೃತನ ಕುಟುಂಬಕ್ಕೆ 10.84 ಲಕ್ಷ ಪರಿಹಾರದ ಚೆಕ್ ಮೂಲಕ ಪಾವತಿ ಮಾಡಿದ್ದರಿಂದ ಜಪ್ತಿ ಮಾಡಿದ ಸಾರಿಗೆ ಬಸ್ ಬಿಡುಗಡೆ ಮಾಡಲಾಯಿತು . ಈ ಸಂದರ್ಭದಲ್ಲಿ ವಕೀಲರಾದ ಎಚ್.ವೀರಭದ್ರಪ್ಪ, ಶಿವಕುಮಾರ ಶೀಲವಂತ ನವರ, ಮಲ್ಲಿಕಾರ್ಜುನ ಗೋನಾಳ, ಶಿವಕುಮಾರ , ಚಾಲಕ ಪ್ರಕಾಶ್ ಇದ್ದರು .

# ಸದಸ್ಯತ್ವ ಅಭಿಯಾನ ಕುರಿತು ಸಭೆ

ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ಕರ್ನಾಟಕ ಮಾದರ ಮಹಾಸಭಾ ಸದಸ್ಯತ್ವ ಅಭಿಯಾನ ಕುರಿತು ಭಾನುವಾರ ಸಭೆ ನಡೆಸಲಾಯಿತು.ಈ ಸಭೆಯಲ್ಲಿ ಸಮಾಜದ ಹಿರಿಯರಾದ ಶೇಕಪ್ಪ ಚಬನೂರ ಅವರು ಮಾತನಾಡಿ ಕರ್ನಾಟಕ ಮಾದರ ಮಹಾಸಭಾದ ಸದಸ್ಯರಾಗಿ ಸಮುದಾಯದ ಬಲ ಹೆಚ್ಚಿಸಿ ಎಂದು ಹೇಳಿದರು. ಬಸ್ಸು ಕಟ್ಟಿಮನಿ ಮಾದರ ಮಾತನಾಡಿ ಕರ್ನಾಟಕ ಮಾದರ ಮಹಾಸಭಾದ ಸದಸ್ಯತ್ವವನ್ನು ಹಳ್ಳಿ ಹಳ್ಳಿಗೆ ಹೋಗಿ ಸದಸ್ಯತ್ವ ಪಡೆಯುವುದರ ಉದ್ದೇಶ ಮತ್ತು ಪ್ರಯೋಜನ ಏನು ಎಂಬುದರ ಕುರಿತು ಸಮಾಜದ ಜನರಿಗೆ ತಿಳಿಸೋಣ




ಎಂದರು.ರಮೇಶ ಯ ದೊಡಮನಿ ಮಾತನಾಡಿ ಮಾದಿಗ ಮತ್ತು ಮಾದಿಗ ಸಂಬಂಧಿತ ಜಾತಿಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ,ರಾಜಕೀಯ ಮತ್ತು ಕೇಂದ್ರ ಮತ್ತು ರಾಜ್ಯದಿಂದ ಬರುವ ಸೌಲಭ್ಯಗಳನ್ನು ನಮ್ಮ ಸಮುದಾಯದವರಿಗೆ ತಲುಪಿಸುವ ಪ್ರಮುಖ ಉದ್ದೇಶ ಕರ್ನಾಟಕ ಮಾದರ ಮಹಾಸಭಾದ ಉದ್ದೇಶವಾಗಿದೆ ಎಂದರು. ಶಂಕ್ರಪ್ಪ ದೊಡಮನಿ, ಗೋಪಾಲ ಕಟ್ಟಿಮನಿ, ಮಾದೇವ ಅಸ್ಕಿ ಮಾತನಾಡಿದರು.ಈ ಸಂಧರ್ಭದಲ್ಲಿ ಕರ್ನಾಟಕ ಮಾದರ ಮಹಾಸಭಾದ ಸದಸ್ಯತ್ವ ಅಭಿಯಾನದ ಉದ್ದೇಶ ಮತ್ತು ಸದಸ್ಯತ್ವದ ಪ್ರಯೋಜನಗಳನ್ನು ತಿಳಿಸುವ ಬಿತ್ತಿ ಪತ್ರವನ್ನು ಬಿಡುಗಡೆ ಮಾಡಲಾಯಿತು. ಸಭೆಯಲ್ಲಿ ರಮೇಶ್ ಹಡಗಿನಾಳ, ಮಲ್ಲಿಕಾರ್ಜುನ ಅಸ್ಕಿ, ಭೀಮಣ್ಣ ಮಾದರ, ಶೈಲೂ ಆಲಗೂರ, ಶಿವಪ್ಪ ಕಾರಗನೂರ, ಮಹೇಶ ಶಿವಪುರ ಮತ್ತು ಸಮಾಜದ ಹಿರಿಯರು ಮತ್ತು ಯುವಕರು ಭಾಗವಹಿಸಿದ್ದರು.

## ನೇಮಕಾತಿ ಪ್ರಕಟಣೆ

**NFSU ನೇಮಕಾತಿ 2026 – 06 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜೂನ್ 27, 2026**

NFSU ನೇಮಕಾತಿ 2026: 06 ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯವು ಜೂನ್ 2026 ರ NFSU ಅಧಿಕೃತ ಅಧಿಸೂಚನೆಯ ಮೂಲಕ ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಧಾರವಾಡ – ಕರ್ನಾಟಕ ಸರ್ಕಾರದಲ್ಲಿ ವೃತ್ತಿಯನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 09–ಜುಲೈ–2026 ರಂದು ಅಥವಾ ಅದಕ್ಕೂ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಅಧಿಕೃತ ವೆಬ್‌ಸೈಟ್: nfsu.ac.in

# ಎಸ್ ಐ ಆರ್ ಪ್ರಕ್ರಿಯೆಯಲ್ಲಿ ಎಂಎಲ್ ಸಿ ಬಾದರ್ಲಿ ದಂಪತಿ ಭಾಗಿ ಹಕ್ಕನ್ನು ಉಳಿಸಿಕೊಳ್ಳುವ ಕೆಲಸವಾಗಲಿ : ಬಸನಗೌಡ ಬಾದರ್ಲಿ

◆ ನೈಜ್ಯ ದೆಸೆ ನ್ಯೂಸ್

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದ ಹಕ್ಕು ಎಲ್ಲರಿಗೂ ಅವಶ್ಯವಾಗಿದ್ದು, ಆ ಹಕ್ಕನ್ನು ಉಳಿಸಿಕೊಳ್ಳಲು ಪ್ರತಿಯೊಬ್ಬರು ಎಸ್ ಐ ಆರ್ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಎಂದು ವಿಧಾನಪರಿಷತ್ ಶಾಸಕ ಬಸನಗೌಡ ಬಾದರ್ಲಿ ಅಭಿಪ್ರಾಯಪಟ್ಟರು.ಚುನಾವಣಾ ಆಯೋಗದಿಂದ ಹಮ್ಮಿಕೊಂಡಿರುವ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಹಿನ್ನಲೆ ಭಾನುವಾರ ಬಾದರ್ಲಿ ಗ್ರಾಮದ ತಮ್ಮ ನಿವಾಸದಲ್ಲಿ ದಂಪತಿ ಸಮೇತ ಎಸ್ ಐ ಆರ್ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಮತದಾನದ ಹಕ್ಕು ಗಟ್ಟಿಗೊಂಡಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಗಟ್ಟಿಗೊಳ್ಳುತ್ತದೆ. ಈ ನಿಟ್ಟಿನಲ್ಲಿ



ರಾಜ್ಯಾದ್ಯಂತ ಹಮ್ಮಿಕೊಂಡಿರುವ ವಿಶೇಷ ಪರಿಷ್ಕರಣೆಯಲ್ಲಿ ಪ್ರತಿಯೊಬ್ಬರು ಭಾಗವಹಿಸುವ ಮೂಲಕ ಜವಾಬ್ದಾರಿ ನಿಭಾಯಿಸಬೇಕು ಎಂದು ಮನವಿ ಮಾಡಿದರು.ಬೂತ್ ಮಟ್ಟದ ಅಧಿಕಾ–ರಿಗಳಿಗೆ ಜನರು ಪೂರ್ಣ ಸಹಕಾರ ನೀಡಿ, ಅಗತ್ಯ ಮಾಹಿತಿಗಳನ್ನು ಒದಗಿಸುವ ಮೂಲಕ ಸರಿಯಾಗಿ ದಾಖಲಾತಿ ಮಾಡಿಕೊಳ್ಳಬೇಕು ಎಂದರು.ಈ ಸಂದರ್ಭದಲ್ಲಿ: ನಂದಿತಾ ಬಸನಗೌಡ ಬಾದರ್ಲಿ ಸೇರಿದಂತೆ ಬಾದರ್ಲಿ ಗ್ರಾಮದ ಗ್ರಾಮಸ್ಥರು ಸಹ ಎಸ್ ಐ ಆರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದರು.



## ಜಾಲಹಳ್ಳಿ 2ನೇ ವಾರ್ಡಿನಲ್ಲಿ ಚುರುಕಿನಿಂದ ನಡೆದ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ

◆ ನೈಜ್ಯ ದೆಸೆ ನ್ಯೂಸ್




ಜಾಲಹಳ್ಳಿ, ಜುಲೈ 5: ಚುನಾವಣಾ ಆಯೋಗದ ನಿರ್ದೇಶನದಂತೆ ಜಾಲಹಳ್ಳಿ ಗ್ರಾಮದ 2ನೇ ವಾರ್ಡಿನಲ್ಲಿ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (SSR) ಕಾರ್ಯ ಚುರುಕಿನಿಂದ ನಡೆಯುತ್ತಿದೆ.ವಾರ್ಡಿನ ಬೂತ್ ಮಟ್ಟದ ಅಧಿಕಾರಿ ಆಂಜನೇಯ ಅವರ ನೇತೃತ್ವದಲ್ಲಿ ಗ್ರಾಮ ಪಂಚಾಯತ್ ಸಿಬ್ಬಂದಿ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡಿ ಮತದಾರರ ಮಾಹಿತಿಯನ್ನು ಪರಿಶೀಲಿಸುತ್ತಿದ್ದಾರೆ. ಈ ವೇಳೆ ಹೊಸ ಮತದಾರರ ಸೇರ್ಪಡೆ, ಮೃತಪಟ್ಟವರು ಹಾಗೂ ಸ್ಥಳಾಂತರಗೊಂಡವರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡುವುದು, ಹೆಸರು, ವಿಳಾಸ ಸೇರಿದಂತೆ ಅಗತ್ಯ ತಿದ್ದುಪಡಿಗಳನ್ನು ಮಾಡಲಾಗುತ್ತಿದೆ.ಈ ಸಂದರ್ಭದಲ್ಲಿ ವಾರ್ಡಿನ ಮುಖಂಡರಾದ ಹುಸೇನ್ ನಾಸಿ ಮಾತನಾಡಿ, "ಪ್ರಜಾಪ್ರಭುತ್ವದ ಯಶಸ್ಸಿಗೆ ನಿಖರವಾದ ಮತದಾರರ ಪಟ್ಟಿ ಅತ್ಯಂತ ಅಗತ್ಯವಾಗಿದೆ. ನಮ್ಮ ವಾರ್ಡಿನಲ್ಲಿ ನಡೆಯುತ್ತಿರುವ ಈ ಪರಿಷ್ಕರಣೆ ಕಾರ್ಯಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. 18 ವರ್ಷ ಪೂರ್ಣಗೊಂಡಿರುವ ಪ್ರತಿಯೊಬ್ಬ ಅರ್ಹ ನಾಗರಿಕರು ಮತದಾರರ ಪಟ್ಟಿಗೆ ತಮ್ಮ ಹೆಸರು ಸೇರ್ಪಡೆ ಮಾಡಿಸಿಕೊಳ್ಳಬೇಕು," ಎಂದು ಕರೆ ನೀಡಿದರು.ಪರಿಷ್ಕರಣೆ ಕಾರ್ಯದಲ್ಲಿ ಗ್ರಾಮ ಪಂಚಾಯತ್ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ವಾರ್ಡಿನ ಪ್ರಮುಖರು ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.ಈ ಸಂದರ್ಭದಲ್ಲಿ ವಾರ್ಡಿನ ಪ್ರಮುಖರಾದ ಬಾಬಾ ಮೆಡಿಕಲ್, ಹುಸೇನ್ ನಾಸಿ, ಮೈಬೂಬ್ ಬುಂಕಲದೊಡ್ಡಿ, ಶಬ್ಬೀರ್, ಗುಲಾಮ ಹುಸೇನ್, ವಾಜಿದ್ ಹಾಗೂ ವಾರ್ಡಿನ ಸಾರ್ವಜನಿಕರು ಉಪಸ್ಥಿತರಿದ್ದರು.

# ಶಿಕ್ಷಣದೊಂದಿಗೆ ಮಕ್ಕಳಿಗೆ ಉತ್ತಮ ಸಂಸ್ಕಾರಗಳನ್ನೂ ಕಲಿಸಿ

◆ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಇಂದಿನ ಮಕ್ಕಳಿಗೆ ಕೇವಲ ಗುಣಮಟ್ಟದ ಶಿಕ್ಷಣ ಕೊಟ್ಟರೆ ಸಾಲದು ಅವ–ರಿಗೆ ಒಳ್ಳೆಯ ಸಂಸ್ಕಾರಗಳನ್ನೂ ಕಲಿಸಿಕೊಡುವ ಅಗತ್ಯ ಇದೆ ಎಂದು ಬಾಳೆಹೊನ್ನೂ–ರಿನ ಶ್ರೀಮದ್ ರಂಭಾಪುರಿ ವೀರ ಸಿಂಹಾಸನಾದೀಶ್ವರ ಶ್ರೀ ಶ್ರೀ 1008 ಜಗದ್ಗುರು ಡಾ. ಪ್ರಸನ್ನ ರೇಣುಕಾ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾ ಭಗವತ್ಪಾದಂಗಳು ಸನ್ನಿಧಿಯವರು ಹೇಳಿದರು. ದೇವರ ಹಿಪ್ಪರಗಿ ಮತಕ್ಷೇತ್ರದ ಯಾಳವಾರ ಗ್ರಾಮದಲ್ಲಿ ಶ್ರೀ ಸೋಮೇಶ್ವರ ವಿದ್ಯಾವರ್ಧಕ ಸಂಘದ ಪ್ರೌಢಶಾಲೆಯ ನೂತನ ಕಟ್ಟಡ ಹಾಗೂ ವಿದ್ಯಾರ್ಥಿ ನಿಲಯ ಉದ್ಘಾಟನೆ ಮತ್ತು ಸುವರ್ಣ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಶಿಕ್ಷಣದಿಂದಲೇ ವ್ಯಕ್ತಿಯ ಸರ್ವಾಂಗೀಣ ಪ್ರಗತಿ ಸಾಧ್ಯ ಆದರೆ ಇಂದು ಸುಶಿಕ್ಷಿತರೆ ಅತಿ ಹೆಚ್ಚು ಅಪರಾಧಗಳಲ್ಲಿ ನಿರತರಾಗಿರುವುದು ವಿಷಾದನೀಯ ಸಂಗತಿಯಾಗಿದೆ. ಹೆತ್ತವರು ಬಾಲ್ಯದಲ್ಲಿ ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರಗಳನ್ನು ಕೊಡಲು ಪ್ರಯತ್ನಿಸಬೇಕು. 50 ವರ್ಷಗಳ ಹಿಂದೆ ಸ್ಥಾಪನೆಯಾದ



ಈ ಶಿಕ್ಷಣ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು ಸುವರ್ಣ ಮಹೋತ್ಸವ ಆಚ–ರಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ನಾನು ಈ ಸಂಘದ ಅಧ್ಯಕ್ಷರಿಗೆ ಹಾಗೂ ಪದಾಧಿಕಾರಿಗಳಿಗೆ ಹಾಗೂ ವಿಶೇಷವಾಗಿ ಇಲ್ಲಿ ಮಕ್ಕಳಿಗೆ ಶಿಕ್ಷಣ ನೀಡುವ ಶಿಕ್ಷಕರಿಗೆ ಅಭಿನಂದಿಸುತ್ತೇನೆ. ಸಂಘದ ಅಧ್ಯಕ್ಷರಾದ ರಾಜುಗೌಡ ನಾಡಗೌಡರು ಬಹಳಷ್ಟು ಆಸಕ್ತಿಯಿಂದ ಕೆಲಸ ಮಾಡುತ್ತಿದ್ದಾರೆ ಅವರಿಗೆ ನಿಮ್ಮೆಲ್ಲರ ಸಹಕಾರ ಇರಲಿ ಎಂದರು. ಮುದ್ದೇಬಿಹಾಳ ಶಾಸಕ ಅಪ್ಪಾಜಿ ನಾಡಗೌಡ,ಮಾಜಿ ಶಾಸಕ ಸೋಮನಗೌಡ ಪಾಟೀಲ, ಶರಣಪ್ಪ ಸುಣಗಾರ, ಸ್ತ್ರೀರೋಗ ತಜ್ಞೆ ಡಾ.ಮಂಜುಳಾ ಪಾಟೀಲ, ಸಾಹಿತಿ ಅಶೋಕ ಹಂಚಲಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಸುವರ್ಣ ಮಹೋತ್ಸವ ನಿಮಿತ್ಯ ಸಂಸ್ಥೆಯಿಂದ ಹೊರ ತಂದ ಸ್ಮರಣ ಸಂಚಿಕೆಯನ್ನು ಶಾಸಕ ಅಪ್ಪಾಜಿ ನಾಡುಗೌಡರು ಬಿಡುಗಡೆಗೊಳಿಸಿದರು. ಯಾಳವಾರದ ಪೂಜ್ಯ ದಾರುಕಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು, ಜಾಲಹಳ್ಳಿಯ ಪರಮ ಪೂಜ್ಯರು, ದೇವರಹಿಪ್ಪರಗಿ ಪರದೇಶಿ ಮಠದ ಪೂಜ್ಯ ಶಿವಯೋಗಿ ಸ್ವಾಮೀಜಿಗಳು ನೇತೃತ್ವ ವಹಿಸಿದ್ದರು. ಶ್ರೀ ಸೋಮೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ರಾಜುಗೌಡ ಸಂ.ನಾಡಗೌಡ್ರ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಹಾಪೂರ,ಬಸನಗೌಡ ಪಾಟೀಲ ಲಿಂಗದಳ್ಳಿ, ಬಸನಗೌಡ ಪಾಟೀಲ ಯಡಿಯಾಪುರ, ಸಚೀನಗೌಡ ಪಾಟೀಲ ,ಸುಭಾಸ ಚಾಯಾಗೋಳ, ಸುರೇಶಗೌಡ ನಾಡಗೌಡ ಬಿಂಜಲಭಾವಿ, ಆನಂದಗೌಡ ದೊಡ್ಡಮನಿ, ಶಿವಾನಂದ ದೇಸಾಯಿ,ಡಾ.ಬಸನಗೌಡ ಪಾಟೀಲ, ಡಾ.ವಿ.ವಿ.ಮಳಗಿ ,ಡಾ.ವಿ.ಡಿ. ಐಹೊಳ್ಳಿ, ಶ್ರೀ ಸೋಮೇಶ್ವರ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು, ಗ್ರಾಮದ ಗಣ್ಯರು, ಹಿರಿಯರು, ಪಾಲಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



## "ಸಂಕಲ್ಪ ಸಮಾಗಮ ಕರಪತ್ರ ಬಿಡುಗಡೆಗೊಳಿಸಿದ ಸ್ವಾಮೀಜಿ"

◆ ನೈಜ್ಯ ದೆಸೆ ನ್ಯೂಸ್



ಕವಿತಾಳ –: ಕೆ ಎಸ್ ಎನ್ ಸಮಾಜ ಸೇವಾ ಸಮಿತಿ ವತಿಯಿಂದ ಪಟ್ಟಣದಲ್ಲಿ ಜುಲೈ 14 ರಂದು ಹಮ್ಮಿಕೊಂಡ ಸಂಕಲ್ಪ ಸಮಾಗಮ ಕಾರ್ಯಕ್ರಮದ ಕರಪತ್ರವನ್ನು ಕಲ್ಮಠದ ಅಭಿನವ ಸಿದ್ದಲಿಂಗ ಸ್ವಾಮೀಜಿ ಅವರು ಶನಿವಾರ ಬಿಡುಗಡೆ ಮಾಡಿದರು.ಈ ಸಂದರ್ಭದಲ್ಲಿ ಮಾತನಾಡಿದ ಶ್ರೀಗಳು ಸಮಿತಿಯು ಹಮ್ಮಿಕೊಂಡಿರುವ ನವಲಿ ಜಲಾಶಯ, ತಿಂತಿ–ಣಿ ಬ್ರಿಡ್ಜ್ ಹತ್ತಿರ ಜಲಾಶಯ ನಿರ್ಮಾಣ ಹಾಗೂ ರಾಯಚೂರು ಜಿಲ್ಲೆಗೆ ಏಮ್ಸ್ ಮಂಜೂರಾತಿಗಾಗಿ ಒತ್ತಾಯಿಸುವುದು ಸೂಕ್ತ. ಸಂಕಲ್ಪ ಸಮಾಗಮ ಸಮಾವೇಶದಲ್ಲಿ ಚಿಕ್ಕಮಗಳೂರು ಗೌರಿಗದ್ದೆ ಆಶ್ರಮದ ಅವಧೂತ ವಿನಯ ಗುರೂಜಿ ಸೇರಿದಂತೆ ಇನ್ನಿತರ ಮಠಾಧೀಶರು ಭಾಗವಹಿಸಲಿದ್ದು ಸಭೆ ಯಶಸ್ವಿಯಾಗಲಿ ಎಂದು ಹಾರೈಸಿದರು.ಈ ಸಂದರ್ಭದಲ್ಲಿ ಮುಖಂಡರಾದ ಯಮನಪ್ಪ ದಿನ್ನಿ, ಎಚ್ ಬಸವರಾಜ, ಈರಣ್ಣ ಕೆಳಗೇರಿ, ಗಫೂರ್ ಸಾಬ್, ಅಳರಪ್ಪ ತುಪ್ಪದೂರು, ನೀಲಕಂಠ ಬೋವಿ, ಕರಿಯಪ್ಪ ದಿನ್ನಿ, ಎಂ.ರಾಘವೇಂದ್ರ ಶೆಟ್ಟಿ, ಯಲ್ಲಪ್ಪ ಮಾಡಗಿರಿ, ರಮೇಶ ನಗನೂರು, ಯಲ್ಲಪ್ಪ ಕೊಡ್ಲಿ, ಯಮನಪ್ಪ ಭಜಂತ್ರಿ, ಮೌನೇಶ ಪೂಜಾರಿ, ರಮೇಶ ಯಾದವ, ಅಜಯ ಕಲಶೆಟ್ಟಿ, ದೇವರಾಜ ರೊಟ್ಟಿ, ಶೈಲೇಶ ಮಿಶ್ರಾ, ನಿಂಗಪ್ಪ ಯಡವಟ್, ರಮೇಶ ಛಲವಾದಿ, ರಮೇಶ ಇರಬಗೇರ, ಮೌನೇಶ ದಿನ್ನಿ, ತಾಯಣ್ಣ ಯಾದವ, ವಿರೂಪಾಕ್ಷಪ್ಪ ಗಲಗ, ವೆಂಕಟೇಶ ಮಡಿವಾಳ ಮತ್ತು ಕೆ.ಎಸ್.ಎನ್. ಸಾಮಾಜಿಕ ಸೇವಾ ಸಮಿತಿಯ ಅಭಿಮಾನಿಗಳು ಉಪಸ್ಥಿತರಿದ್ದರು.

# "ಏಳು ವರ್ಷಗಳಿಂದ ಸ್ಥಗಿತಗೊಂಡಿದ್ದ ಆಸ್ಪತ್ರೆ ಕಾಮಗಾರಿಗೆ ಶಾಸಕರಿಂದ ಚಾಲನೆ"

◆ ನೈಜ್ಯ ದೆಸೆ ನ್ಯೂಸ್

ಮಸ್ಕಿ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡದ ಕಾಮಗಾರಿಗೆ ಶಾಸಕ ಆರ್.ಬಸನಗೌಡ ತುರ್ವಿಹಾಳ ಶನಿವಾರ ಭೂಮಿ ಪೂಜೆ ನೆರವೇರಿಸಿದರು.ಮಸ್ಕಿ –: ಭೂವಿವಾದದಿಂದಾಗಿ ಕಳೆದ 7 ವರ್ಷಗಳಿಂದ ಸ್ಥಗಿತಗೊಂಡಿದ್ದ ಪಟ್ಟಣದ ಸರ್ಕಾರಿ ಆಸ್ಪತ್ರೆಯ ಸಮುದಾಯ ಆರೋಗ್ಯ ಕೇಂದ್ರದ ಕಟ್ಟಡ ಕಾಮಗಾರಿಗೆ ಇದೀಗ ಮರುಜೀವ ಬಂದಿದೆ. ಸಮುದಾಯ ಆರೋಗ್ಯ ಕೇಂದ್ರದ 30 ಹಾಸಿಗೆಗಳ ಆಸ್ಪತ್ರೆ ಕಟ್ಟಡದ ಕಾಮಗಾ–ರಿಗೆ ಶಾಸಕ ಹಾಗೂ ಖಾದಿ ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಆರ್.ಬಸನಗೌಡ ತುರ್ವಿಹಾಳ ಶನಿವಾರ ಚಾಲನೆ ನೀಡಿದರು.ಬಳಿಕ ಮಾತನಾಡಿದ ಶಾಸಕರು 'ಮೂರು ಬಾರಿ ಕ್ಷೇತ್ರದ ಶಾಸಕರಾಗಿದ್ದ ಪ್ರತಾಪಗೌಡ ಪಾಟೀಲ ಅವರ ನಿರ್ಲಕ್ಷ್ಯವೇ ಪಟ್ಟಣದ ಸರ್ಕಾರಿ ಆಸ್ಪತ್ರೆ ಅಭಿವೃದ್ಧಿಗೆ ಅಡ್ಡಿಯಾಯಿತು' ಎಂದು ಆರೋಪಿಸಿದರು.'ಆಸ್ಪತ್ರೆ ನಿರ್ಮಾಣಕ್ಕಾಗಿ ಹಿರಿಯ ಮುಖಂಡ ಕೆ. ವೀರನಗೌಡರು ನಾಲ್ಕು ಎಕರೆ ಜಾಗವನ್ನು ದಾನವಾಗಿ ನೀಡಿದ್ದರೂ,



ಅವರ ತಂದೆಯ ಹೆಸರನ್ನು ಆಸ್ಪತ್ರೆಗೆ ನಾಮಕರಣ ಮಾಡುವ ಬೇಡಿಕೆಯನ್ನು ಅಂದಿನ ಶಾಸಕರು ಒಪ್ಪದ ಕಾರಣ ಯೋಜನೆ ವರ್ಷಗಳ ಕಾಲ ಸ್ಥಗಿತಗೊಂಡಿತು' ನಾನು ಸರ್ಕಾರದ ಮಟ್ಟದಲ್ಲಿ ಮಾತುಕತೆ ನಡೆಸಿ ಸಮಸ್ಯೆ ಇತ್ಯರ್ಥಗೊಳಿಸಿದ್ದರಿಂದ ಬಾಕಿ ಉಳಿದ ಕಾಮಗಾರಿಗೆ ಟೆಂಡರ್ ಕರೆಯಲಾಗಿ–ತ್ತು ಎಂದು ಹೇಳಿದರು.ತಾವು ಶಾಸಕರಾದ ಬಳಿಕ ಅಂದಿನ ಆರೋಗ್ಯ ಸಚಿವರು ಹಾಗೂ ಜಿಲ್ಲಾಧಿಕಾರಿ ನಿತೀಶ್ ಕೆ. ಅವರೊಂದಿಗೆ ಚರ್ಚಿಸಿ ನಾಲ್ಕು ಎಕರೆ ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳುವ ಮೂಲಕ ಆಸ್ಪತ್ರೆ ನಿರ್ಮಾಣಕ್ಕೆ ಇದ್ದ ಕಾನೂನು ತೊಡಕನ್ನು ನಿವಾರಿಸಲಾಗಿದೆ ಎಂದು ತಿಳಿಸಿದರು. ಆಸ್ಪತ್ರೆ ಕಟ್ಟಡ ಕಾಮಗಾರಿಯನ್ನು ನಾಲ್ಕು ತಿಂಗಳಲ್ಲಿ ಪೂರ್ಣಗೊಳಿಸಿ, ಶೀಘ್ರವೇ ಅದನ್ನು ತಾಲ್ಲೂಕು ಆಸ್ಪತ್ರೆಯಾಗಿ ಮೇಲ್ದರ್ಜೆಗೇ–ರಿಸಲಾಗುವುದು ಎಂದರು.ಸರ್ಕಾರಿ ಆಸ್ಪತ್ರೆ ಜಾಗದ ಕುರಿತು ಉಂಟಾಗಿದ್ದ ವಿವಾದದ ಹಿನ್ನೆಲೆಯಲ್ಲಿ ನ್ಯಾಯಾಲಯದ ತಡೆಯಾಜ್ಞೆ ಇದ್ದ ಕಾರಣ ಕಟ್ಟಡದ ಕಾಮಗಾರಿ ಅರ್ಧದಲ್ಲೇ ನಿಂತಿತ್ತು. ಹಿಂದಿನ ಜಿಲ್ಲಾಧಿಕಾರಿ ನಿತೀಶ್ ಕೆ. ಅವರು ಸಂಬಂಧಿತ ಜಾಗವನ್ನು ಭೂಸ್ವಾಧೀನಪಡಿಸಿಕೊಂಡ ಹಿನ್ನೆಲೆಯಲ್ಲಿ ಕಾಮಗಾರಿಗೆ ಇದ್ದ ಅಡ್ಡಿಗಳು ದೂರವಾಗಿವೆ. 30 ಹಾಸಿಗೆಗಳ ಸಾಮರ್ಥ್ಯದ ಸಮುದಾಯ ಆರೋಗ್ಯ ಕೇಂದ್ರದ ಉಳಿದ ಕಟ್ಟಡ ಕಾಮಗಾರಿಯನ್ನು ₹2.84 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಬೆಂಗಳೂರಿನ ಬಿಲ್ವೆಕ್ ಎಂಜಿನಿಯರ್ ಸೊಲ್ಯೂಷನ್ಸ್ ಕಂಪನಿಗೆ ಕಟ್ಟಡ ಕಾಮಗಾರಿ ಟೆಂಡರ್ ಆಗಿದೆ. ಮೂರು ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಗುತ್ತಿಗೆದಾರ ಬಸನಗೌಡ ಮಿಲ್ಪಿ ತಿಳಿಸಿದ್ದಾರೆ.ಈ ಸಂದರ್ಭದಲ್ಲಿ ತಹಶೀಲ್ದಾರ್ ಮಂಜುನಾಥ ಬೋಗಾವತಿ, ಎಪಿಎಂಸಿ ಅಧ್ಯಕ್ಷ ಸಿದ್ದನಗೌಡ ಮಾಟೂರು, ವೈದ್ಯಾಧಿಕಾರಿ ಡಾ. ಅಮರೇಶ ಪಾಟೀಲ, ಡಾ. ಹನುಮಂತರಾಯ ತಳ್ಳಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಮೈಬುಸಾಬ ಮುದ್ದಾಪೂರ, ಸಿಪಿಐ ರಂಗಪ್ಪ ಆರೋಗ್ಯ ಇಲಾಖೆ ಎಂಜನಿಯರ್, ಗುತ್ತಿಗೆದಾರು ಇದ್ದರು.

# "ಹಿರೇಹಣಿಗಿ ಬಳಿ ಸೇತುವೆ ನಿರ್ಮಾಣಕ್ಕೆ ಸಂಸದರಿಗೆ ಮನವಿ"

**ಕವಿತಾಳ ಸಮೀಪದ ಹಿರೇಹಣಿಗಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸೇತುವೆ ನಿರ್ಮಾಣಕ್ಕೆ ಕ್ರಮ ವಹಿಸುವಂತೆ ಸಂಸದ ಜಿ.ಕುಮಾರ ನಾಯಕ ಅವರಿಗೆ ಈಚೆಗೆ ರೈತರು ಮನವಿ ಸಲ್ಲಿಸಿದರು.**

◆ ನೈಜ್ಯ ದೆಸೆ ನ್ಯೂಸ್

ಕವಿತಾಳ: ಮನವಿ ಸ್ವೀಕರಿಸಿದ ಸಂಸದ ಜಿ. ಕುಮಾರ ನಾಯಕ ಅವರು ರೈತರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುವುದಾಗಿ ಭರವಸೆ ನೀಡಿದರು. ಈ ಕುರಿತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (NHAI) ಅಧಿಕಾರಿಗಳೊಂದಿಗೆ ಶೀಘ್ರದಲ್ಲೇ ಚರ್ಚಿಸಿ, ಸ್ಥಳ ಪರಿಶೀಲನೆ ನಡೆಸುವಂತೆ ಸೂಚಿಸಲಾಗುವುದು ಎಂದು ತಿಳಿಸಿದರು. ರೈತರ ಕೃಷಿ ಚಟುವಟಿಕೆಗಳಿಗೆ ಯಾವುದೇ ರೀತಿಯ



ತೊಂದರೆಯಾಗದಂತೆ ಹಾಗೂ ಸಂಚಾರಕ್ಕೂ ಅನುಕೂಲವಾಗುವ ರೀತಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಪ್ರಯತ್ನಿಸುವುದಾಗಿ ಹೇಳಿದರು. ರೈತರು, ಅಂಡರ್ ಪಾಸ್ ನಿರ್ಮಾಣದಿಂದ ಜಮೀನುಗಳಿಗೆ ಸಂಚಾರ ಅಸಾಧ್ಯವಾಗುವ ಆತಂಕವಿದ್ದು, ಕೃಷಿ ಯಂತ್ರೋಪಕರಣಗಳು ಹಾಗೂ ಟ್ರ್ಯಾಕ್ಟರ್‌ಗಳ ಓಡಾಟಕ್ಕೆ ಮೇಲ್ಸೇತುವೆಯೇ ಸೂಕ್ತ ಪರಿಹಾರವಾಗಿದೆ ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ರೈತರು ಮತ್ತು ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಗ್ರಾಫಿಕ್ ಡಿಸೈನ್ (Graphic Design)

ಗ್ರಾಫಿಕ್ ಡಿಸೈನ್ ಎಂದರೆ ಚಿತ್ರಗಳು, ಬಣ್ಣಗಳು, ಅಕ್ಷರಗಳು (Typography) ಮತ್ತು ವಿನ್ಯಾಸಗಳ ಮೂಲಕ ಮಾಹಿತಿಯನ್ನು ಆಕರ್ಷಕವಾಗಿ ಪ್ರಸ್ತುತಪಡಿಸುವ ಕಲೆ. ಇಂದು ಡಿಜಿಟಲ್ ಮಾರ್ಕೆಟಿಂಗ್, ಸೋಶಿಯಲ್ ಮೀಡಿಯಾ, ಜಾಹೀರಾತು, ಮುದ್ರಣ ಹಾಗೂ ಬ್ರಾಂಡಿಂಗ್ ಕ್ಷೇತ್ರಗಳಲ್ಲಿ ಗ್ರಾಫಿಕ್ ಡಿಸೈನರ್‌ಗಳಿಗೆ ಹೆಚ್ಚಿನ ಬೇಡಿಕೆಯಿದೆ.ಕೋರ್ಸ್‌ನಲ್ಲಿ ಕಲಿಯುವ ವಿಷಯಗಳು ಗ್ರಾಫಿಕ್ ಡಿಸೈನ್ ಮೂಲಭೂತ ತತ್ವಗಳು ಕಲರ್ ಥಿಯರಿ (ಬಣ್ಣಗಳ ಬಳಕೆ) ಟೈಪೋಗ್ರಫಿ (ಅಕ್ಷರ ವಿನ್ಯಾಸ) ಲೋಗೋ ಡಿಸೈನ್ ಪೋಸ್ಟರ್ ಮತ್ತು ಬ್ಯಾನರ್ ವಿನ್ಯಾಸ ಸೋಶಿಯಲ್ ಮೀಡಿಯಾ ಕ್ರಿಯೇಟಿವ್‌ಗಳು ಬ್ರೋಚರ್, ಫ್ಲೈಯರ್, ಬಿಸಿನೆಸ್ ಕಾರ್ಡ್ ವಿನ್ಯಾಸ ಬ್ರ್ಯಾಂಡಿಂಗ್ ಮತ್ತು ಕಾರ್ಪೊರೇಟ್ ಐಡೆಂಟಿಟಿ ಪ್ಯಾಕೇಜಿಂಗ್ ಡಿಸೈನ್ UI/UX ಪರಿಚಯ (ಕೆಲವು ಕೋರ್ಸ್‌ಗಳಲ್ಲಿ)ಪ್ರಿಂಟ್ ಮತ್ತು ಡಿಜಿಟಲ್ ಡಿಸೈನ್‌ಗಳು ಕಲಿಯಬೇಕಾದ ಪ್ರಮುಖ ಸಾಫ್ಟ್‌ವೇರ್‌ಗಳು Adobe Photoshop,Adobe Illustrator,Adobe,InDesign,Canva,CorelDRAW (ಕೆಲವು ಸಂಸ್ಥೆಗಳಲ್ಲಿ) Figma (UI/UX ಗಾಗಿ) ಕೋರ್ಸ್ ಅವಧಿ ಸರ್ಟಿಫಿಕೇಟ್ ಕೋರ್ಸ್: 2–6 ತಿಂಗಳು ಡಿಪ್ಲೊಮಾ: 6–12 ತಿಂಗಳು ಪದವಿ (B.Des/BVA): 3–4 ವರ್ಷ Careers360 +1 ಅರ್ಹತೆ 10ನೇ ಅಥವಾ 12ನೇ ತರಗತಿ ನಂತರ ಸೇರಬಹುದು (ಕೋರ್ಸ್‌ಗೆ ಅನುಗುಣವಾಗಿ)ಪದವಿ ಕೋರ್ಸ್‌ಗಳಿಗೆ ಸಾಮಾನ್ಯವಾಗಿ 12ನೇ ತರಗತಿ ಪಾಸ್ ಅಗತ್ಯ.ಉದ್ಯೋಗಾವಕಾಶಗಳು Graphic Designer,Logo Designer,Social Media Designer,Brand Designer,UI Designer Packaging,Designer,Motion,Graphics Designer Freelancer ಆರಂಭಿಕ ವೇತನ ಫ್ರೆಶರ್ ₹15,000–₹30,000 ಪ್ರತಿ ತಿಂಗಳು ಅನುಭವದೊಂದಿಗೆ: ₹40,000–₹1,00,000+ ಪ್ರತಿ ತಿಂಗಳು (ಕೌಶಲ್ಯ ಮತ್ತು ಸಂಸ್ಥೆಯನ್ನು ಅವಲಂಬಿಸಿ

# ಬಸನಗೌಡ ಫೌಂಡೇಶನ್ ನಿಂದ 36ನೇ ಉಪಕಾಲುವೆ ಸ್ವಚ್ಛತಾ ಕಾರ್ಯ

## ನವಲಿ ಸಮನಾಂತರ ಜಲಾಶಯ ನಿರ್ಮಾಣಕ್ಕೆ ಪ್ರಾಮಾಣಿಕ ಪ್ರಯತ್ನ : ಬಸನಗೌಡ ಬಾದರ್ಲಿ

◆ ನೈಜ್ಯ ದೆಸೆ ನ್ಯೂಸ್

ಸಿಂಧನೂರು.ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೇತೃತ್ವದ ಕಾಂಗ್ರೆಸ್ ಸರ್ಕಾರ ಈ ಭಾಗದ ರೈತರ ಸರ್ವಾಂಗೀಣ ಅಭಿವೃದ್ಧಿಗೆ ಕಂಕಣಬದ್ಧವಾಗಿದ್ದು, ನವಲಿ ಸಮನಾಂತರ ಜಲಾಶಯ ನಿರ್ಮಾಣಕ್ಕಾಗಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ವಿಧಾನಪರಿಷತ್ ಶಾಸಕ ಬಸನಗೌಡ ಬಾದರ್ಲಿ ಹೇಳಿದರು. ಅವರು ಭಾನುವಾರ ತಾಲ್ಲೂಕಿನ ವೆಂಕಟೇಶ್ವರ ಕ್ಯಾಂಪನಲ್ಲಿ ಬಸನಗೌಡ ಪೌಂಡೇಷನ್ ಆಯೋಜಿಸಿದ್ದ 40 ಕಿ.ಮೀ. ವ್ಯಾಪ್ತಿಯ 36ನೇ ಉಪಕಾಲುವೆ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು. ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್ ಉದ್ಘಾಟನಾ ಸಮಾರಂಭದಲ್ಲಿ ಕೇಂದ್ರ ಸಚಿವರು ಸೇರಿ ಮೂರು ರಾಜ್ಯದ ಮುಖ್ಯಮಂತ್ರಿಗಳು ಸುದೀರ್ಘವಾಗಿ ಚರ್ಚೆ ನಡೆಸಿದ್ದು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಗಟ್ಟಿತೀರ್ಮಾನ ಕೈಗೊಂಡು, ಈ ಭಾಗದ ರೈತರ ಪರವಾಗಿ ಧ್ವನಿಯಾಗಿ ಕೆಲಸ ಮಾಡಿ ಇತಿಹಾಸ ನಿರ್ಮಿಸಿದ್ದಾರೆ. ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರಿಗೆ ಸಮರ್ಪಕ ನೀರಾವರಿ ಒದಗಿಸುವ ಸಂಬಂಧ ಹಲವು ವಿಚಾರಗಳನ್ನು ಚರ್ಚಿಸಲಾಗಿದ್ದು, ಶೀಘ್ರವೇ ನವಲಿ ಜಲಾಶಯ ನಿರ್ಮಾಣ ಸೇರಿದಂತೆ ನೀರಾವರಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವ ಕೆಲಸ ಮಾಡಲಾಗುತ್ತದೆ ಎಂದರು. ತುಂಗಭದ್ರಾ ಎಡದಂಡೆ ವ್ಯಾಪ್ತಿಯ ರೈತರ ಬಹುದಿನಗಳ ಬೇಡಿಕೆಯ ಭಾಗವಾಗಿ ಎಡದಂಡೆ ವ್ಯಾಪ್ತಿಯ ಉಪಕಾಲುವೆ ಸ್ವಚ್ಛತಾ



ಕಾರ್ಯ ಹಮ್ಮಿಕೊಂಡಿದ್ದು, ರೈತನ ಮಗನಾಗಿ, ವಿಧಾನಪರಿಷತ್ ಶಾಸಕನಾಗಿ ಕ್ಷೇತ್ರದ ರೈತರ, ವಿದ್ಯಾರ್ಥಿ ಯುವಜನರ ಅಭಿವೃದ್ಧಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇನೆ. ಎರಡು ವರ್ಷದ ಅವಧಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವ ಮೂಲಕ ಎಲ್ಲ ವರ್ಗಗಳಿಗೆ ನ್ಯಾಯ ದೊರಕಿಸಿಕೊಟ್ಟಿದ್ದು, ಮುಂದಿನ ದಿನಗಳಲ್ಲೂ ಕ್ಷೇತ್ರದ ಜನರ ಧ್ವನಿಯಾಗಿ ಕೆಲಸ ಮಾಡುವೆ ಎಂದರು.ಕೆಪಿಸಿಸಿ ಎಸ್ಟಿ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ವೆಂಕಟೇಶ ನಾಯಕ ಮಾತನಾಡಿ, ಬಸನಗೌಡ ಬಾದರ್ಲಿ ಅವರು ವಿಧಾನಪರಿಷತ್ ಸದಸ್ಯರಾಗಿ ಕ್ಷೇತ್ರದ ರೈತರ ಅಭಿವೃದ್ಧಿ ಶ್ರಮಿಸುತ್ತಿದ್ದು, 200 ಕ್ಕೂ ಹೆಚ್ಚು ಬೋರ್ ವೆಲ್ ವಿತರಣೆ ಮಾಡಿ ರೈತರಿಗೆ ಅನುಕೂಲ ಕಲ್ಪಿಸಿದ್ದಾರೆ. ರೈತರ ವಿಚಾರಗಳಿಗೆ ಸಂಬಂಧಿಸಿದಂತೆ ಅನೇಕ ಹೋರಾಟ ಮಾಡಿದ್ದು, ಜೋಳ ಖರೀದಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸುವ ಮೂಲಕ ರೈತಪರವಾಗಿ ಕೆಲಸ ಮಾಡುತ್ತಿದ್ದಾರೆ. ಬಸನಗೌಡ ಬಾದರ್ಲಿ ದೂರದೃಷ್ಟಿಯ ನಾಯಕರಾಗಿದ್ದಾರೆ ಎಂದರು.ಕಾಂಗ್ರೆಸ್ ಮುಖಂಡ ಹೊನ್ನನಗೌಡ ಬೆಳಗುರ್ಕಿ ಮಾತನಾಡಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಖಾಜಾಹುಸೇನ್ ರೌಡಕುಂದಾ, ರಾಮನಗೌಡ ಬಸ್ಸಾಪುರ, ಅಮರೇಶಗೌಡ ಗೊರೇಬಾಳ, ಶರಣೇಗೌಡ, ಸುಬ್ಬರಾವ್, ಅಯ್ಯಪ್ಪ ಬಾರಕೇರ, ಮಲ್ಲಿಕಾರ್ಜುನ ಹೂಗಾರ, ಸಂಗನಗೌಡ ದೇವರಗುಡಿ, ರಾಮನಗೌಡ ಬಸಾಪುರ, ಶರಣಪ್ಪ ಅಯೋಧಿ ಪೈಕ್ಯಾಂಪ್, ಹನುಮೇಶ ಟಿ, ನಲ್ಲ ನಾರಾಯಣ, ಅಮರಯ್ಯ ಸ್ವಾಮಿ, ಮಹಾಂತಪ್ಪ ಉ, ಸತ್ಯನಾರಾಯಣ, ವೆಂಕಣ್ಣ, ಸುಬ್ಬರಾವ್, ಶ್ರೀನಿವಾಸ, ಪಣಿ, ದೇವೇಂದ್ರಗೌಡ, ಬಸವರಾಜ ಕುರಿ, ಪ್ರಭಾಕರ ರಾವ್, ರಾಮು, ಶಾಸಯ್ಯ, ನಾಗೇಶ್ವರ ರಾವ್, ಎನ್ ಶ್ರೀನಿವಾಸ, ಎಂ.ನಾಗೇಶ್ವರ, ಪಂಪನಗೌಡ, ಶ್ರೀನಿವಾಸ ಮಲ್ಲಿಕಾರ್ಜುನ, ಗಂಗಾಧರ ಅಪ್ಪಾಜಿ, ಅವಿನಾಶ್ ಗಾಂಧಿನಗರ ಸೇರಿದಂತೆ ನೂರಾರು ಜನರು ರೈತರು ಭಾಗವಹಿಸಿದ್ದರು ಹೂಳೆತ್ತುವ ಕಾರ್ಯ...ಬಸನಗೌಡ ಪೌಂಡೇಷನ್ ಭಾಗಿತ್ವದಲ್ಲಿ ತುಂಗಭದ್ರಾ ಎಡದಂಡೆ ವ್ಯಾಪ್ತಿಯ 36ನೇ ಉಪಕಾಲುವೆಯ ಹೂಳು ತೆಗೆಯುವ ಕಾರ್ಯ ಭರದಿಂದ ಸಾಗಿದ್ದು, 10ಕ್ಕೂ ಹೆಚ್ಚು ಟ್ರಾಕ್ಟರ್ ಹಾಗೂ ಜೆಸಿಬಿ ಯಂತ್ರಗಳ ಮೂಲಕ ಕೆಲಸ ನಡೆದಿದೆ. ಸುಮಾರು 40 ಕಿ.ಮೀ. ಉದ್ದದ ಕಾಲುವೆಗೆ ಸ್ವಚ್ಛತಾ ಕಾರ್ಯ ನಡೆದಿದ್ದು, ವೆಂಕಟೇಶ್ವರ ಕ್ಯಾಂಪಿನಿಂದ ಬೂದಿವಾಳದವರೆಗೆ ಸ್ವಚ್ಛತಾ ಕಾರ್ಯ ನಡೆಯಲಿದೆ. ನೀರಾವರಿ ಇಲಾಖೆ ಅಧಿಕಾರಿಗಳು ಹಾಗೂ ರೈತರು ಸ್ವಚ್ಛತಾ ಕಾರ್ಯಕ್ಕೆ ಕೈ ಜೋಡಿಸಿದ್ದಾರೆ.



## ಬರ ಸವಾಲು, ಪರಿಹಾರಕ್ಕೆ ಕಲಬುರಗಿಯಲ್ಲಿ ಸಿಎಂ ಡಿಕೆಶಿ ಸಭೆ

◆ ನೈಜ್ಯ ದೆಸೆ ನ್ಯೂಸ್



ಕಲಬುರಗಿ: ಸೂಪರ್ ಎಲ್‌ನೀನೋ ಕಾರಣಕ್ಕೆ ಬರ ಆವರಿಸಿದ್ದು, ವಿಭಾಗವಾರು ಸ್ಥಿತಿ ಅರಿಯಲು ಖುದ್ದು ಸಿಎಂ ಡಿ.ಕೆ.ಶಿವಕುಮಾರ ಕಲಬುರಗಿಗೆ ಆಗಮಿಸುತ್ತಿದ್ದಾರೆ ಎಂದು ಗೃಹ, ಐಟಿ&ಬಿಟಿ, ಇ&ಆಡಳಿತ, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.ಸೂಪರ್ ಎಲ್‌ನಿನೋ ಸಮಸ್ಯೆ ಎಲ್ಲೆಡೆ ಇದ್ದು, ಮಳೆ ಕೊರತೆ ಜತೆಗೆ ಬಿಸಿ ಗಾಳಿ ಹೆಚ್ಚಿಸಲಿದೆ. ಸವಾಲನ್ನು ಎದುರಿಸಲು ಬೆಂಗಳೂರಿನಲ್ಲಿ ಎರಡು ಬಾರಿ ಸಭೆ ನಡೆಸಿದ್ದು, ಕಲ್ಯಾಣ ಕರ್ನಾಟಕದ ವಿಭಾಗವಾರು ಬರ ಸಭೆ ಮಂಗಳವಾರ ನಡೆಸಲಿದ್ದಾರೆ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.ಮುಖ್ಯಮಂತ್ರಿಗಳು ಸೋಮವಾರ ಬಸವಕಲ್ಯಾಣಕ್ಕೆ ಮೊದಲು ಭೇಟಿ ನೀಡಲಿದ್ದಾರೆ. ಸಂಜೆಗೆ ಕಲಬುರಗಿಗೆ ಬರಲಿದ್ದು, ಶರಣಬಸವೇಶ್ವರ ದೇವಾಲಯ ಹಾಗೂ ಕೆಬಿಎನ್ ದರ್ಗಾಕ್ಕೆ ಭೇಟಿ ನೀಡಲಿದ್ದಾರೆ. ಮಂಗಳವಾರ ಬೆಳಗ್ಗೆ ವಿಭಾಗೀಯ ಮಟ್ಟದ ಅಧಿಕಾರಿಗಳ ಸಭೆ ನಡೆಸಲಿದ್ದಾರೆ. ಬರ ಎದುರಿಸಲು ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಸುದೀರ್ಘ ಚರ್ಚೆ ನಡೆಸಲಿದ್ದಾರೆ. ನಂತರ ಮಾಧ್ಯಮಗಳಿಗೆ ವಿವರಣೆ ನೀಡಲಿದ್ದಾರೆ ಎಂದರು.ಇದುವರೆಗೆ ಶೇ.35 ಮಳೆ ಕೊರತೆಯಾಗಿದ್ದು, ಉದ್ದು, ಹೆಸರು ಬೆಳೆ ಕೈಕೊಟ್ಟಿದೆ. ಮೋಡ ಬಿತ್ತನೆ ಚರ್ಚೆ ನಡೆಯುತ್ತಿದ್ದು, ಸದ್ಯಕ್ಕೆ ಪ್ರಸ್ತಾವನೆ ಇಲ್ಲ. ಮಳೆ ನಿರೀundefined ಇದೆ ಎಂದರು.ಯುವ ಕರ್ನಾಟಕ ಸಂಕಲ್ಪ ಸಿಎಂ ಡಿ.ಕೆ.ಶಿವಕುಮಾರ ಅವರಿಗಿದೆ. ಕಿತ್ತೂರು ಹಾಗೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಹಾಗೂ ಆರ್ಥಿಕ ಪ್ರಗತಿಗೆ ನೀಲನೆಗೆ ಸೂಚಿಸಿದ್ದಾರೆ ಎಂದರು.ವೈದ್ಯಕಿಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ್ ಮಾತನಾಡಿ, ಕಲಬುರಗಿ ಸೇರಿ ಉತ್ತರ ಕರ್ನಾಟಕ ಭಾಗದ ಜಿಲ್ಲೆಗೆ ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಭೀಮಾ ನದಿಗೆ ನೀರು ಬಿಡುವಂತೆ ಸರ್ಕಾರ ಮಹಾರಾಷ್ಟ್ರ ಸರ್ಕಾರಕ್ಕೆ ಪತ್ರ ಬರೆದಿದೆ. ಮಂಗಳವಾರ ನಡೆಯಲಿರುವ ವಿಭಾಗವಾರು ಸಭೆಯಲ್ಲಿ ಚರ್ಚಿಸಲಾಗುವುದು.ಪತ್ರಿಕಾಗೋಷ್ಠಿಯಲ್ಲಿ ಶಾಸಕರಾದ ಎಂ.ವೈ.ಪಾಟೀಲ, ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷಿತ್ ಶಾಸಕರಾದ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ, ಜೆಸ್ಕಾಂ ಅಧ್ಯಕ್ಷ ಪ್ರವಿಣ ಪಾಟೀಲ ಹರವಾಳ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜರ್ ಆಲಂಖಾನ್ ಇತರರಿದ್ದರು.


## "ಬೈಕ್ ಅಪಘಾತ ಪಾದಚಾರಿ ಸ್ಥಳದಲ್ಲಿ ಸಾವು"

◆ ನೈಜ್ಯ ದೆಸೆ ನ್ಯೂಸ್



ಮಾನ್ವಿ –: ಮಾನ್ವಿ ತಾಲೂಕಿನ ಅಮರೇಶ್ವರ ಕ್ಯಾಂಪ್‌ನ ಪಿಡಬ್ಲೂಡಿ ಕಚೇರಿ ಮುಂಭಾಗದ ಹೆದ್ದಾರಿಯಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಪಾದಚಾರಿ ರಾಜ (30) ಎಂಬವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.ಮೃತ ಯುವಕ ರಾಜ, ಹೆದ್ದಾರಿ ಪಕ್ಕದಲ್ಲಿ ವಾಕಿಂಗ್ ಮಾಡುತ್ತಿದ್ದ ವೇಳೆ, ಅಮರೇಶ್ವರ ಕ್ಯಾಂಪ್ ಕಡೆಯಿಂದ ಬಂದ ಬೈಕ್ ಢಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಬೈಕ್ ಸವಾರ ಮಾರಪ್ಪ ಗಂಭೀರವಾಗಿ ಗಾಯಗೊಂಡಿದ್ದು, ಹೆಚ್ಚಿನ ಚಿಕಿತ್ಸೆಗೆ ರಾಯಚೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.ಹಿಂಬದಿ ಸವಾರ ನಂದೀಶ್ ಗಾಯಗೊಂಡಿದ್ದು ಮಾನ್ವಿಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿದು ಬಂದಿದೆ. ಘಟನೆ ಮಾನ್ವಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

# ರಾಜ್ಯಮಟ್ಟದ"ಮಾಧ್ಯಮ ರತ್ನ ಪ್ರಶಸ್ತಿ"ಗೆ ಪತ್ರಕರ್ತ ಸೈಯದ್ ಅಬ್ದುಲ್ ಗಯಾಸ್ ಭಾಜನ




◆ ನೈಜ್ಯ ದೆಸೆ ನ್ಯೂಸ್

ಸುಮಾರು ವರ್ಷಗಳಿಂದ ಪತ್ರಿಕಾ ರಂಗದಲ್ಲಿ ಛಾಯಾಗ್ರಾಹಕರಾಗಿ ಮತ್ತು ಪತ್ರಕರ್ತರಾಗಿ ತಮ್ಮನ್ನು ತಾವು ತೊಡಗಿಸಿಕೊಂಡು ಬೆಳೆದು, ಬೆಳೆಯುತ್ತಿರುವ ಸ್ನೇಹಿಜೀವಿ ಸೈಯದ್ ಅಬ್ದುಲ್ ಗಯಾಸ್ ಅವರಿಗೆ ಇಂದು ರಾಯಚೂರಿನ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಕಲಾ ಸಂಕುಲ ಸಂಸ್ಥೆ ರಾಯಚೂರು ಮತ್ತು ಲೋಹಿಯಾ ಪ್ರತಿಷ್ಠಾನ ರಾಯಚೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಆಯೋಜಿಸಿರುವ ಅಭಿನಂದನಾ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಎಂದೂ ಮರೆಯದ ಹಾಡು ಹಳೆಯ ಗೀತೆಗಳ ಮಧುರ ಗಾಯನ ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದ ಮಾಧ್ಯಮ ರತ್ನ ಪ್ರಶಸ್ತಿ ಪ್ರದಾನವಾಗಲಿದೆ. ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಾದ್ಯಂತ ಗಯಾಸ್ ಅವರು ಉತ್ತಮ. ಫೋಟೋಗ್ರಾಫರ್ ಎಂದೆ ಜನರ ಮನದಲ್ಲಿ ಗುರುತಿಸಿಕೊಂಡಿದ್ದಾರೆ. ಯಾವುದೇ ಸಣ್ಣ,ದೊಡ್ಡ ಕಾರ್ಯಕ್ರಮಗಳಿದ್ದರೂ ಅಲ್ಲಿ ಗಯಾಸ್ ಅವರು ಇದ್ದೇ ಇರುತ್ತಾರೆ. ಇತ್ತೀಚಿನ ಆರೇಳು ವರ್ಷಗಳಿಂದ ಗಯಾಸ್ ಅವರು ಜನವಾದಿ ದಿನಪತ್ರಿಕೆ ಯ ತಾಲೂಕಾ ವರದಿಗಾರರಾಗಿ ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.ಇವರ ಈ ಅನುಪಮವಾದ ಸೇವೆ ಗುರುತಿಸಿ ಕಲಾ ಸಂಕುಲ ಸಂಸ್ಥೆಯು ರಾಜ್ಯ ಮಟ್ಟದ ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಗಯಾಸ್ ಅವರ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ಸಂದ ಅರ್ಹ ಗೌರವವಾಗಿದೆ. ಸೈಯದ್ ಅಬ್ದುಲ್ ರಜಾಕ ಮತ್ತು ಅಕ್ತರ್ ಬೇಗ್‌ಂ ದಂಪತಿಗಳ ಪುಣ್ಯ ಗರ್ಭದಲ್ಲಿ ದಿನಾಂಕ 01-04-1978 ರಲ್ಲಿ ರಾಯಚೂರಿನಲ್ಲಿ ಜನಿಸಿದ ಸೈಯದ್ ಅಬ್ದಲ್ ಗಯಾಸ್ ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮಸ್ಕಿ ಹಿರಿಯ ಪ್ರಾಥ-'ಮಿಕ ಶಾಲೆ ಮತ್ತು ಮಾನ್ವಿ ಪಟ್ಟಣದ ಆದಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಪ್ರೌಢ ಶಿಕ್ಷಣವನ್ನು ಮಾನ್ವಿ ಬಾಲಕರ ಸರಕಾರಿ ಪ್ರೌಢಶಾಲೆಯಲ್ಲಿ ಮತ್ತು ಆರ್ಟ್ ಆಫ್ ಡಿಪ್ಲೊಮಾ ಕೋರ್ಸ್ ನ್ನು ರಾಯಚೂರಿನಲ್ಲಿ ಮುಗಿಸಿದರು.ಗಯಾಸ್ ಅವರು ಎಸ್. ಎಸ್ .ಎಲ್. ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದಾಗ ಮಾನ್ವಿ ಪಟ್ಟಣದ ಪಾಂಡುರಂಗ ಶೆಟ್ಟಿ ಮತ್ತು ಸತೀಶ್ ಶೆಟ್ಟಿ ಸಹೋದರರು ನಡೆಸುತ್ತಿದ್ದ ಶ್ರೀ ಎಲೆಕ್ಟ್ರಾನಿಕ್ಸ್ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದರು. ಆ ಅಂಗಡಿಗೆ ಅನೇಕ ಪತ್ರಕರ್ತರು ಆಗಮಿಸುತ್ತಿದ್ದರು. ಆ ಸಂದರ್ಭದಲ್ಲಿ ಶೆಟ್ಟಿ ಸಹೋದರರು ಗಯಾಸ್ ಅವರಲ್ಲಿ ಅಡಗಿದ್ದ ಫೋಟೋಗ್ರಫಿ ಕಲೆಯನ್ನು ಗುರುತಿಸಿದ್ದರು.ಈ ಪ್ರತಿಭೆಯನ್ನು ಅನೇಕ ಪತ್ರಕರ್ತ ಮಿತ್ರರಿಗೆ ಪರಿಚಯಿಸಿದರು. ಅಂದಿನಿಂದ ಗಯಾಸ್ ಅವರು ಪ್ರೆಸ್ ಫೋಟುಗ್ರಾಪರ್ ಆಗಿ ತಮ್ಮನ್ನು ತಾವು ಗುರುತಿಸುಕೊಳ್ಳಲು ಆರಂಭಿಸಿದರು. ಮಾನ್ವಿ ಪಟ್ಟಣದಲ್ಲಿ ಅನೇಕ ಸಂಘ ಸಂಸ್ಥೆಗಳವರು ಮತ್ತು ಸಂಘಟನೆಗಳವರು ಯಾವುದೇ ಸಮಾರಂಭ ಪ್ರತಿಭಟನೆ, ಮನವಿ ಪತ್ರ ಸಲ್ಲಿಸುವ ಕಾರ್ಯಕ್ರಮಗಳಿದ್ದರೆ ಗಯಾಸ್ ಅವರಿಗೆ ಆಹ್ವಾನಿಸಿ ಫೋಟು ತೆಗೆದು ಪತ್ರಕರ್ತರಿಗೆ ಕೊಡಲು ಹೇಳಿ 300 ರೂಪಾಯಿ, 500 ರೂಪಾಯಿ ನೀಡಲಾರಂಭಿಸಿದರು. ಈ ಹಣವನ್ನು ತಮ್ಮ ಓದು ಮತ್ತು ಬದುಕಿಗೆ ಆಧಾರವಾಗಿಸಿಕೊಂಡರು.ಮಾನ್ವಿಯಲ್ಲಿ ನಡೆಯುವ ಕಲ್ಮಠದ ಗಾರಿಗೆ ಜಾತ್ರೆ, ದಸರಾ ಮಹೋತ್ಸವ ಕಾರ್ಯಕ್ರಮಗಳಲ್ಲಿ ಮತ್ತು ತಾಲೂಕಾ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ, ಕಬ್ ಮತ್ತು ಬುಲ್ ಬುಲ್ ಸಮ್ಮೇಳನಗಳಲ್ಲಿ ಹಾಗೂ ಇನ್ನಿತರ ಕಾರ್ಯಕ್ರಮಗಳಲ್ಲಿ ಇವರ ಸೇವೆ ಗುರುತಿಸಿ ಉತ್ತಮ ಫೋಟೋಗ್ರಾಫರ್ ಎಂದು ಸನ್ಮಾನಿಸಿ ಗೌರವಿಸಿದ್ದಾರೆ. ರಾಯಚೂರಿನಲ್ಲಿ ನಡೆದ 82 ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಉತ್ತಮ ಛಾಯಾಗ್ರಾಹಕ ಎಂದು ಜಿಲ್ಲಾಧಿಕಾರಿಗಳು ಸನ್ಮಾನಿಸಿ ಗಯಾಸ್ ಅವರನ್ನು ಅಭಿನಂದಿಸಿ ಗೌರವಿಸಿದ್ದಾರೆ.ಗಯಾಸ್ ಅವರು ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯರಾಗಿ, ತಾಲೂಕಾ ಉಪಾಧ್ಯಕ್ಷರಾಗಿ, ಸಹ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಸರ್ವ ಜನಾಂಗದ ಪ್ರೀತಿಗೆ ಪಾತ್ರರಾಗಿರುವ ಗಯಾಸ್ ಅವರು ಸರಳ ಜೀವನ ನಡೆಸಿ ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾರೆ.ಇವರ ಸೇವೆಗೆ ಈಗಾಗಲೇ ಕಾರ್ಯನಿರತ ಪತ್ರಕರ್ತರ ಸಂಘ ಕೊಡ ಮಾಡಲ್ಪಡುವ ಜಿಲ್ಲಾ ಉತ್ತಮ ವರದಿಗಾರ ಪ್ರಶಸ್ತಿ ಮತ್ತು ತಾಲೂಕಾ ಉತ್ತಮ ಪತ್ರಕರ್ತ ಪ್ರಶಸ್ತಿಗಳು ಸಂದಿವೆಯಲ್ಲದೆ ಅನೇಕ ಸಂಘ ಸಂಸ್ಥೆಗಳು, ಶಾಲಾ ಕಾಲೇಜುಗಳು, ಮಠ ಮಾನ್ಯಗಳು, ಸಮುದಾಯದ ಸಂಘಟನೆಗಳು ಗಯಾಸ್ ಅವರ ಸೇವೆ ಗುರುತಿಸಿ ಅನೇಕ ವೇದಿಕೆಗಳಲ್ಲಿ ಹತ್ತು ಹಲವು ಸನ್ಮಾನಗಳು, ಗೌರವಗಳು ಇವರಿಗೆ ಒಲಿದು ಬಂದಿವೆ.ಇಂದು ಸಂಜೆ 6 ಗಂಟೆಗೆ ರಾಜ್ಯ ಮಟ್ಟದ ಪ್ರಶಸ್ತಿಗೆ ಭಾಜನರಾಗಲಿರುವ ಸೈಯದ್ ಅಬ್ದುಲ್ ಗಯಾಸ್ ಅವರ ಪತ್ರಿಕಾ ರಂಗದ ಸೇವೆ ಹೀಗೇ ಸದಾ ಇನ್ನೂ ನೂರ್ಕಾಲ ಮುಂದುವರೆಯಲಿ ಇಂತಹ ಹತ್ತು ಹಲವು ಪ್ರಶಸ್ತಿಗಳು ಅವರ ಮುಡಿಗೇರುತ್ತಿರಲಿ ಎಂದು ನಾನು ಈ ಸಂದರ್ಭದಲ್ಲಿ ಆಶಿಸಿ ಅಭಿನಂದಿಸುತ್ತೇನೆ. ರಮೇಶಬಾಬು ಯಾಳಗಿ, ಮಾನ್ವಿ

## ಜಾಲಹಳ್ಳಿಯಲ್ಲಿ ಕೆ. ಶಿವನಗೌಡ ನಾಯಕ (KSN) ಅವರ 49ನೇ ಜನ್ಮದಿನೋತ್ಸವ ಅಂಗವಾಗಿ ಆಹ್ವಾನ ಪತ್ರಿಕೆ ವಿತರಣೆ

◆ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ, ಜುಲೈ 3: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ಮಾಜಿ ಸಚಿವ ಕೆ. ಶಿವನಗೌಡ ನಾಯಕ (KSN) ಅವರ 49ನೇ ಜನ್ಮದಿನೋತ್ಸವ ಹಾಗೂ ಸಂಕಲ್ಪ ಸಮಾವೇಶದ ಅಂಗವಾಗಿ ಆಹ್ವಾನ ಪತ್ರಿಕೆ ವಿತರಣೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮಕ್ಕೂ ಮುನ್ನ ಜಾಲಹಳ್ಳಿಯ ಶ್ರೀ ಲಕ್ಷ್ಮೀ ರಂಗನಾಥ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಗ್ರಾಮದ ಎಲ್ಲಾ ವಾರ್ಡುಗಳು, ಮನೆಗಳು ಹಾಗೂ ಅಂಗಡಿ-ಮುಂಗಟ್ಟುಗಳಿಗೆ ಜುಲೈ 14, 2026 ರಂದು ಕವಿತಾಳದಲ್ಲಿ ನಡೆಯಲಿರುವ ಜನ್ಮದಿನೋತ್ಸವ ಮತ್ತು ಸಂಕಲ್ಪ ಸಮಾವೇಶದ ಆಹ್ವಾನ ಪತ್ರಿಕೆಗಳನ್ನು ವಿತರಿಸಲಾಯಿತು.ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡ ಚಂದಪ್ಪ ಬುದ್ದಿನ್ನಿ, ಸಂಕಲ್ಪ ಸಮಾವೇಶದ ಮುಖ್ಯ ಉದ್ದೇಶಗಳು ಸಮಗ್ರ ನೀರಾವರಿ



ಯೋಜನೆ, ನವಲಿ ಜಲಾಶಯ ನಿರ್ಮಾಣ, ತಿಂತಿಣಿ ಬ್ರಿಡ್ಜ್ ಬಳಿ ಜಲಾಶಯ ನಿರ್ಮಾಣ ಹಾಗೂ ಏಮ್ಸ್ (AIIMS) ಮಂಜೂರಾತಿಗೆ ಒತ್ತಾಯಿಸುವುದು ಎಂದು ತಿಳಿಸಿದರು. ಗ್ರಾಮ ಪಂಚಾಯತ್ ಸದಸ್ಯ ಅಬ್ದುಲ್ ರೆಹಮಾನ್ ಖುರೇಷಿ ಮಾತನಾಡಿ, ಉತ್ತರ ಕರ್ನಾಟಕದಲ್ಲಿ ಹಸಿರು ಕ್ರಾಂತಿಗೆ ಪೂರಕವಾಗುವ ಜಲಾಶಯಗಳ ನಿರ್ಮಾಣದ ಸಂಕಲ್ಪದೊಂದಿಗೆ ಈ ಸಮಾವೇಶವನ್ನು ಆಯೋಜಿಸಲಾಗಿದೆ. ಆದ್ದರಿಂದ ಜುಲೈ 14ರಂದು ಕವಿತಾಳದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಶಿವು ಪಾಣಿ ಸೌಕಾರ್, ಚಂದಪ್ಪ ಬುದ್ದಿನ್ನಿ, ರಮೇಶ್ ಆನ್ವರಿ, ಗೋವಿಂದಪ್ಪ ಆಲ್ಗೇರಿ, ಶಂಕರಗೌಡ ಮಾಲಿಪಾಟೀಲ್, ಶ್ರೀಧರ ದೇಸಾಯಿ, ಆನಂದ್ ಪಾಟೀಲ್, ಈಶಣ್ಣ ಕಾಟಮಳ್ಳಿ, ರಂಗಪ್ಪ ಬಂಡಿ, ತಮ್ಮಣ್ಣ ಹೇರುಂಡಿ, ಶಿವಪ್ಪ ಮ್ಯಾಗೇರಿ, ಬಾಳಪ್ಪ ತಗ್ಗೆಹಳ್ಳಿ, ವೆಂಕೋಬ ಪೂಜಾರಿ, ರಂಗನಾಥ ಮಕಾಶಿ. ಗ್ರಾಮ ಪಂಚಾಯತ್ ಉಪಾಧ್ಯಕ್ಷ ವೀರೇಶ್ ಅರಕೇರಿ, ಗ್ರಾಮ ಪಂಚಾಯತ್ ಸದಸ್ಯರಾದ ಸರಬಣ್ಣ ಹಂಪರಗುಂದಿ, ಬಸವರಾಜ್ ಗೋಪಾಲಪುರ, ಅಬ್ದುಲ್ ರೆಹಮಾನ್ ಖುರೇಷಿ ಸೇರಿದಂತೆ ನೂರಾರು ಕಾರ್ಯಕರ್ತರು ಉಪಸ್ಥಿತರಿದ್ದರು.